# ಅಪರಂಜಿ

ತಿಳಿನಗೆಯ ಕಾರಂಜಿ



ಜೂನ್ - 2013





# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪುಟ 30
ಸಂಚಿಕೆ - 9
ಜೂನ್ - 2013

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಉಪಚುನಾವಣೆ ಪ್ರಸಂಗ | **ವತ್ಸಸ** | 3 |
| ಎಂದು ಏಕಾದಶಿ | **ವಿ. ಪ್ರಾಣೇಶ್ ರಾವ್** | 8 |
| ಹವಾಮಾನ ವರದಿ | **ಸಿ.ಆರ್. ಸತ್ಯ** | 11 |
| ಸರ್ಕಾರಿ ಕಛೇರಿಯಲ್ಲಿ... | **ಗಣೇಶ ಹೆಗ್ಗಡೆ** | 13 |
| ರೈಲ್ವೇ ಬೋರ್ಡ್.... | **ಇ.ಆರ್. ರಾಮಚಂದ್ರನ್** | 17 |
| ಮೂಷಕ ಮಹರ್ಷಿಯ... | **ವೈ.ವಿ. ಗುಂಡೂರಾವ್** | 20 |
| ಚಂದ್ರಮತಿ | **ನಂದಿನಿ ಕಾಪಡಿ** | 25 |
| ಹೀಗೂ ಉಂಟೇ... | **ವಸುಮತಿ ಉಡುಪ** | 29 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 32 |
| ತುಂತುರು | **ದಂನಾಳ** | 34 |
| ಎಲ್ಲಾ ಶಿವನಾಟ | **ಗುಂಡುರಾವ್ ದೇಸಾಯಿ** | 36 |
| ಯಾರು ಬೈದಿದ್ದು | **ಬೇಲೂರು ರಾಮಮೂರ್ತಿ** | 40 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● **ಪ್ರಕಾಶ್**



ಚುನಾವಣೆ ನಂತರ ಯಡಿಯೂರಪ್ಪ ''ಕಿಂಗ್'' – ಶ್ರೀಮತಿ ಶೋಭಾ

**● ಹಗಲುಗನಸು ಎಂದರೆ ಇದೇ ಇರಬೇಕು !!**

★★★

ಮುಷರಫ್ ಸ್ಪರ್ಧೆಗೆ ಆಜೀವ ನಿಷೇಧ – ಪಾಕ್ ಸುದ್ದಿ

**● ಪ್ರಜಾಪ್ರಭುತ್ವದ ಚಿಗುರು !!**

★★★

''ತೆಂಗಿನಕಾಯಿ ಗುರುತಿಗೆ ಓಟು ಕೊಡಿ'' – ಬಿ.ಎಸ್.ವೈ.

**● ಅದು ಈಡುಗಾಯಾಗದಿರಲಿ !!**

★★★

ಜೆ.ಡಿ.ಎಸ್.ಗೆ ಅಭಿವೃದ್ಧಿ ಬೇಕಿಲ್ಲ – ಹೇಳಿಕೆ

**● ''ಸ್ವಂತ ಅಭಿವೃದ್ಧಿ'' ಹೊರತಾಗಿ.... !!**

★★★

ಕಪ್ಪು ಹಣ ಚಿದಂಬರ ರಹಸ್ಯ ಅಲ್ಲ – ಶ್ರೀ ದೇವೇಗೌಡ

**● ಆಹಾ! ದ್ವಂದ್ವಾರ್ಥ ಅಂದರೆ ಇದೇ !!**

★★★

ಬದುಕಿನಲ್ಲಿ ಹಣಕ್ಕಿಂತ ಸಾಧನೆ ಶಾಶ್ವತ – ಹೇಳಿಕೆ

**● ಆದಾಯ ತೆರಿಗೆಯವರಿಗೆ ಇದನ್ನು ಮನದಟ್ಟು ಮಾಡಿಕೊಡಬೇಕು !!**

★★★

''ನಾವು ಸರಿಯಾಗಿರಬೇಕು'' ಎಂದು ತಮ್ಮ ಇನ್ನಿಂಗ್ಸ್ ಆರಂಭಿಸಿರುವ ಶ್ರೀ ಸಿದ್ದರಾಮಯ್ಯನವರಿಗೆ ಅಪರಂಜಿಯ ಶುಭಾಶಯಗಳು

★★★

''ಕಾವಲುನಾಯಿ'' ಅನ್ನುವುದಕ್ಕಿಂತ *"Watch Dog"*

**● ಅನ್ನುವುದು ಗಂಭೀರವಾಗಿ ಕಾಣುತ್ತೆ !!**

★★★



# ಉಪಚುನಾವಣೆ ಪ್ರಸಂಗ

**- ವತ್ಸನ**

**ನೀ**ವು ಏನೇ ಹೇಳಿ, ಬೆಂಗಳೂರಿನಲ್ಲಿ ಬೆಸ್ಟ್ ಅಕ್ಕಿರೊಟ್ಟಿ ತಿನ್ನಬೇಕು ಅಂದ್ರೆ ಇಲ್ಲಿನ ಖ್ಯಾತ ನಾಟಕಮಂದಿರ ರಂಗಶಂಕರದ ತಿಂಡಿ ಕೌಂಟರಿಗೇ ಹೋಗಬೇಕು. ಹೊರಗೆ ಮಳೆ ಹನಿಯುತ್ತಿರುವ ಸಂಜೆ, ಬೆಚ್ಚಗೆ ಕೌಂಟರಿನ ಮುಂದಿರುವ ಬೆಂಚೊಂದರ ಮೇಲೆ ಕುಳಿತು ಮುಂದಿನ ಮೇಜಿನ ಮೇಲೆ ಬಾಂಡ್ಲೆ ರೊಟ್ಟಿ, ಎರಡು ಬಗೆ ಚಟ್ನಿ ಇರುವ ತಟ್ಟೆಯನ್ನು ಇಟ್ಟುಕೊಂಡು, ಕೈಯ್ಯಲ್ಲಿ ಹಬೆಯಾಡುತ್ತಿರುವ ಸ್ಟ್ರಾಂಗ್ ಕಾಫಿಯನ್ನು ಗುಟುಕರಿಸುವ ಮಜ, ಬ್ರಹ್ಮಾನಂದದಂತೆ ಅನುಭವದಿಂದ ಮಾತ್ರ ದೊರಕುವ ಜ್ಞಾನ. ಶರಲೇಖನಿಗೆ ಈ ಅನುಭವವನ್ನು ಕೊಡುವ ಉದ್ದೇಶದಿಂದ ಅಂದು ಸಂಜೆ ನಾವಿಬ್ಬರೂ ರಂಗಶಂಕರಕ್ಕೆ ಬಂದಿದ್ದೆವು. ''ಮಳೆ ನಿಲ್ಲುವವರೆಗೆ'' ಎಂಬ ನಾಟಕ ಇತ್ತು ಆ ದಿನ. ಕೌಂಟರಿನಲ್ಲಿ ರೊಟ್ಟಿಗಾಗಿ ಸರದಿ ಕಾಯುತ್ತಿದ್ದಾಗ ಹಿಂದಿನಿಂದ ''ಹಲೋ ಅಂಕಲ್'' ಎಂಬ ಕೂಗು ಕೇಳಿಸಿತು. ಯಾರಪ್ಪಾ ಈ ಕೋಕಿಲ ಕಂಠೆ ಅಂತ ಹಿಂದಕ್ಕೆ ತಿರುಗಿ ನೋಡಿದೆ. ಕೆಂಪು ಜೀನ್ಸ್ ಮತ್ತು ಹಳದಿ ಟಾಪ್ ಧರಿಸಿ ಆರ್‌ಸಿಬಿ ಟೀಮಿನವಳಂತೆ ಕಾಣುತ್ತಿದ್ದ ಬಾಬ್ ಕೇಶವಿನ್ಯಾಸದ ಯುವತಿಯೊಬ್ಬಳು ಮುಗುಳ್ನಗುತ್ತಾ ನನ್ನ ಕಡೆಗೇ ಬರುತ್ತಿದ್ದಳು. ನಾನು ಹಲೋ ಎಂದು ಉತ್ತರಿಸಿ ಅವಳು ಸಮೀಪಿಸುವುದರೊಳಗೆ ಅವಳನ್ನು ನೆನಪಿಸಿಕೊಳ್ಳಲು ತೀವ್ರಯತ್ನ ನಡೆಸಿದೆ. ಛಟ್ಟನೆ ಹೊಳೆಯಿತು ''ಸುಧಾ!''

''ಹಾಯ್ ಸುಧಾ, ಎಷ್ಟು ವರ್ಷ ಆಯಿತು ನಿನ್ನ ನೋಡಿ. ಮುಂಬಯಿಯಿಂದ ಬಂದದ್ದು ಯಾವಾಗ? ಅಪ್ಪ ಹೇಗಿದ್ದಾನೆ?'' ಅಂತೆಲ್ಲಾ ಪ್ರಶ್ನೆಗಳ ಮಳೆಯನ್ನೇ ಸುರಿಸಿದೆ. ಸುಧಾ ನನ್ನ ಹಳೆಯ ಗೆಳೆಯ ಪಾರೀಖನ ಮಗಳು. ಅವನನ್ನು ನೋಡಿ ಸುಮಾರು ದಿನ ಆಗಿತ್ತು.

''ಅಪ್ಪ ಚೆನ್ನಾಗಿದ್ದಾರೆ. ನನಗೆ ಇಲ್ಲಿ ಬೆಂಗಳೂರಿನಲ್ಲಿ ಟೈಮ್ಸ್ ಆಫ್ ಇಂಡಿಯಾದಲ್ಲಿ ರಿಪೋರ್ಟರ್ ಕೆಲಸ ಸಿಕ್ಕಿದೆ. ಆರು ತಿಂಗಳಾಯಿತು ಇಲ್ಲಿಗೆ ಬಂದು. ಬಂದಾಗಿನಿಂದ ನಿಮ್ಮನ್ನು ಸಂಪರ್ಕಿಸೋಕ್ಕೆ ಪ್ರಯತ್ನ ಮಾಡ್ತಾನೇ ಇದ್ದೀನಿ. ನಾಟ್ ರೀಚಬಲ್ ಅಂತ ಉತ್ತರ ಬರ್ತಾ ಇತ್ತು'' ಅಂದಳು ಸುಧಾ. ಅವಳನ್ನು ಶರಲೇಖನಿಗೆ ಪರಿಚಯಿಸಿದೆ. ಆತ, ''ಹಾಂಕಾಂಗ್‌ನಿಂದ ಯಾವತ್ತು ಬಂದೆ ಮಗೂ?'' ಅಂತ ಕೇಳಿದ. ಸುಧಾ ಅವಾಕ್ಕಾದಳು. ''ನಿಜವಾಗ್ಲೂ ನೀವು ಪತ್ತೇದಾರರೇ. ಅದು ಹೇಗೆ ಪತ್ತೆ ಹಚ್ಚಿದಿರಿ ನಾನು ಹಾಂಕಾಂಗಿನಿಂದ ಬಂದಿರೋದನ್ನ?'' ಅಂತ ಮೆಚ್ಚುಗೆಯ ದನಿಯಿಂದ ಕೇಳಿದಳು. ''ಬಹು ಸುಲಭ. ಹಾಂಕಾಂಗಿನಲ್ಲಿ ಬರ್ಡ್ ಫ್ಲೂ

ಸೋಂಕಿನ ಬಗ್ಗೆ ಅನುಮಾನ ಇರೋದ್ರಿಂದ ಅಲ್ಲಿಂದ ಹೊರಡೋ ಪ್ರಯಾಣಿಕರನ್ನೆಲ್ಲಾ ತಪಾಸಣೆ ಮಾಡಿ ಸೋಂಕು ಇಲ್ಲದಿದ್ರೆ ಅವರ ಮುಂಗೈ ಮೇಲೆ ಒಂದು ಅಲ್ಟ್ರಾ ವಯೋಲೆಟ್ ಬೆಳಕಿನಲ್ಲಿ ಮಾತ್ರ ಕಾಣುವ ಮುದ್ರೆ ಒತ್ತುತ್ತಾರೆ. ಆ ಮುದ್ರೆ ಸಾಮಾನ್ಯ ಬೆಳಕಿನಲ್ಲಿ ಕಾಣದೇ ಇದ್ರೂ ಪಕ್ಕದ ಬೀದಿಯಲ್ಲಿ ಬೆಳಗ್ತಿರೋ ಸೋಡಿಯಂ ವೇಪರ್ ಬೆಳಕಿನಲ್ಲಿ ಬಹು ಮಬ್ಬಾಗಿ ಕಾಣುತ್ತೆ. ಇಕೋ ನೋಡು ವತ್ಸನ'' ಎನ್ನುತ್ತಾ ಸುಧಾಳ ಮುಂಗೈಯನ್ನು ಎತ್ತಿಹಿಡಿದು ನನಗೆ ತೋರಿಸಿದ. ಮುದ್ರೆ ಕ್ಷೀಣವಾಗಿ ಕಾಣುತ್ತಿತ್ತು. ಅಷ್ಟು ಹೊತ್ತಿಗೆ ನಮ್ಮ ರೊಟ್ಟಿಗಳು ಸಿದ್ಧವಾಗಿದ್ದವು. ಶರಲೇಖ ಮುಂದಾಲೋಚನೆಯಿಂದ ಮೂರು ಪ್ಲೇಟುಗಳನ್ನು ಆರ್ಡರ್ ಮಾಡಿದ್ದ. ರೊಟ್ಟಿ ತಿನ್ನುತ್ತಾ ಸುಧಾಳೊಂದಿಗೆ ಲೋಕದ ವಿದ್ಯಮಾನಗಳ ಬಗ್ಗೆ ಮಾತನಾಡಿದೆವು. ಶರಲೇಖನ ತೀಕ್ಷ್ಣ ತರ್ಕ ಸುಧಾಳ ಮೇಲೆ ಬಹುವಾಗಿ ಪ್ರಭಾವ ಬೀರಿದ್ದು ಸುಲಭವಾಗಿ ತಿಳಿಯಬಹುದಾಗಿತ್ತು.

ನಾಟಕ ನೋಡಿ ಮನೆಗೆ ಹೋದಾಗ ರಾತ್ರಿ ಹತ್ತು ಘಂಟೆ ಆಗಿತ್ತು. ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ನಮ್ಮ ಫ್ಲಾಟಿಗೆ ಬಂದು ನಮ್ಮ ಹಿಂದಿರುಗುವಿಕೆಯನ್ನೇ ಕಾಯುತ್ತಿದ್ದರು. ಒಬ್ಬ ತರುಣ ಪೋಲಿಸ್ ಅಧಿಕಾರಿ ಅವರ ಜೊತೆಗಿದ್ದ. ನಾವು ಒಳಗೆ ಹೋದ ಕೂಡಲೇ ಉಳ್ಳಾಗಡ್ಡಿ ಎದ್ದುನಿಂತು, ''ಇಂವ ವಿನಾಯಕ್ ಅಂತಾರೀ ಸಾಯೇಬ್ರಾ. ಚಿಕ್ಕಮಗಳೂರಲ್ಲಿ ಪೋಲಿಸ್ ಇನ್ಸ್‌ಪೆಕ್ಟರ್ ಆದಾನ. ಒಂದು ತಲೆನೋವು ಸಮಸ್ಯಾ ಇದುರಾಗ್ಯದೆ ಇವಗ. ಏನಾರ ಸ್ವಲ್ಪ ನೋಡ್ರಲಾ'' ಅಂತ ಹೇಳಿದರು. ಶರಲೇಖ ಮನೆಗೆ ಬಂದ ಮಿತ್ರನನ್ನು ಆದರದಿಂದ ತಬ್ಬಿ, ''ಆಯಿತು. ಮೊದಲು ಸಮಸ್ಯೆ ಏನು ಅಂತ ಹೇಳು ವಿನಾಯಕ್'' ಅಂತ ಹೇಳಿದ ನಂತರ ಎಲ್ಲರೂ ಕುಳಿತುಕೊಂಡೆವು. ವಿನಾಯಕ್ ತನ್ನ ಅಹವಾಲನ್ನು ಹೇಳಲು ಪ್ರಾರಂಭಿಸಿದ.

''ಸಾರ್. ಕಳೆದ ಒಂದು ವರ್ಷದಿಂದ ನನ್ನನ್ನ ಚಿಕ್ಕಮಗಳೂರು ಠಾಣೆಗೆ ಹಾಕಿದ್ದಾರೆ. ಇಲ್ಲಿನವರೆಗೂ ಎಲ್ಲಾ ಸುಸೂತ್ರವಾಗಿಯೇ ನಡೆದಿತ್ತು. ಈಗ ಒಂದು ಹೊಸ ಸಮಸ್ಯೆ ಉದ್ಭವಿಸುವ ಲಕ್ಷಣಗಳು ಕಾಣಿಸ್ತಿವೆ. ಇದಕ್ಕೆ ಪರಿಹಾರ ಹುಡುಕೋದು ಜಟಿಲವಾದ ಕೆಲಸ, ಶರಲೇಖನನ್ನು ಕೇಳೋಣ ಅಂತ ಉಳ್ಳಾಗಡ್ಡಿ ಸಾಹೇಬ್ರು ಹೇಳಿ ನನ್ನನ್ನ ಇಲ್ಲಿಗೆ ಕರೆತಂದರು. ನೀವು ಸಹಾಯ ಮಾಡಕ್ಕೆ ಒಪ್ಪಿದ್ದಕ್ಕೆ ನಾನು ತುಂಬಾ ಆಭಾರಿ'' ಅಂತ ಪ್ರಾರಂಭಿಸಿ ವಿನಾಯಕ್ ತನ್ನ ಬವಣೆಯನ್ನು ವಿವರಿಸತೊಡಗಿದ.

''ಬಾಬಾಬುಡನ್‌ಗಿರಿಯಲ್ಲಿರೋ ದತ್ತಪೀಠದ ಬಗ್ಗೆ ನಿಮಗೆ ತಿಳಿದೇ ಇದೆ. ಹಿಂದೂಗಳಿಗೂ ಮುಸಲ್ಮಾನರಿಗೂ ಬಹು ಪವಿತ್ರ ಸ್ಥಳ ಇದು ಅಂತ ಎರಡೂ ಪಂಗಡಗಳ ಜನ ನಂಬಿರುವ ಜಾಗ ಅದು. ಈ ಜಾಗ ನಮ್ಮ ಚಿಕ್ಕಮಗಳೂರಿನ ವ್ಯಾಪ್ತಿಗೇ ಬರುತ್ತೆ. ಇಲ್ಲಿನವರೆಗೂ ನಾನು ಊರಿನ ಶಾಂತಿಯನ್ನು ಕಾಪಾಡಿಕೊಂಡು ಗಲಭೆ ಗಲಾಟೆಗಳಿಲ್ಲದ ಹಾಗೆ ನೋಡಿಕೊಂಡಿದ್ದೇನೆ. ಈಗ ನನ್ನ ಮುಂದಿರುವ ಸಮಸ್ಯೆಯ ವಿಷಯಕ್ಕೆ ಬರುವೆ. ಮುಂದಿನ ಭಾನುವಾರ, ಅಂದರೆ ಇವತ್ತಿಗೆ ಒಂದು ವಾರಕ್ಕೆ ಸರಿಯಾಗಿ ಗಿರಿಯಲ್ಲಿ ಉರುಸ್ ನಡೆಯಲಿದೆ. ಇದು ಪ್ರತಿವರ್ಷ ನಡೆಯುವ ಜಾತ್ರೆ. ಸಾವಿರಾರು ಭಕ್ತಾದಿಗಳು ಬಂದು ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಉರುಸ್‌ಗೆ ಎಲ್ಲಾ ಸಿದ್ಧತೆಗಳನ್ನೂ ಮಾಡುತ್ತಿರುವಾಗ

ಒಮ್ಮೆಲೇ ಒಂದು ಸುದ್ದಿ ಬಂದಿದೆ. ಮುಂದಿನ ಶುಕ್ರವಾರ ಅಂದರೆ ಜಾತ್ರೆಗೆ ಎರಡು ದಿನ ಮುಂಚೆ ಒಬ್ಬ ಜನನಾಯಕರು ಬಂದು ಇನ್ನು ಹತ್ತು ದಿನಗಳಲ್ಲಿ ಇಲ್ಲಿ ನಡೆಯುವ ಉಪಚುನಾವಣೆಯ ಪ್ರಯುಕ್ತ ಚುನಾವಣಾ ಭಾಷಣವನ್ನು ಮಾಡುತ್ತಾರಂತೆ. ಅವರ ಭಾಷಣ ಈ ಉರುಸ್‌ಗೆ ವಿರೋಧವಾಗಿ ಕಾಣುವ ಸಂಭವ ಬಹುವಾಗಿದೆ. ಹಾಗೆಂದು ಅವರ ಭಾಷಣವನ್ನು ರದ್ದುಗೊಳಿಸುವ ಹಾಗೂ ಇಲ್ಲ. ಚುನಾವಣಾ ಭಾಷಣ ಎಲ್ಲ ರಾಜಕೀಯ ಪಕ್ಷಗಳ ಜನ್ಮ ಸಿದ್ಧ ಹಕ್ಕು ಎಂಬುದು ಸರ್ವವಿದಿತ. ಭಾಷಣ ಪ್ರಚೋದಕವಾಗಿದ್ದರೆ ಉರುಸ್‌ನಲ್ಲಿ ಗಲಭೆಯಾಗುವುದು ಖಂಡಿತ. ಭಾಷಣ ನಿಲ್ಲಿಸಿದರೆ ಚುನಾವಣಾ ಕಮಿಷನ್ನಿನಿಂದ ನಾನು ತೊಂದರೆ ಎದುರಿಸಬೇಕಾಗುತ್ತದೆ. ನಮ್ಮ ಬಾಸ್‌ರವರನ್ನು ಕೇಳಿದರೆ ಹ್ಯಾಗೋ ಮ್ಯಾನೇಜ್ ಮಾಡಿಬಿಡೀಪ್ಪ ಅಂತ ಹೇಳಿ ಕೈತೊಳೆದುಕೊಂಡು ಬಿಟ್ಟಿದ್ದಾರೆ. ಏನು ಮಾಡೋದು ತೋಚ್ತಾ ಇಲ್ಲ'' ಅಂತ ಹೇಳಿದ ವಿನಾಯಕ್.

ಎಲ್ಲವನ್ನು ಸಾವಧಾನದಿಂದ ಕೇಳಿಸಿಕೊಂಡ ಶರಲೇಖ, ''ವಿನಾಯಕ್, ಆ ರಾಜಕೀಯ ನಾಯಕರನ್ನೇ ಸಂಪರ್ಕಿಸಿ, ವಿಷಯದ ಸೂಕ್ಷ್ಮತೆಯನ್ನು ವಿವರಿಸಿ ಭಾಷಣ ಮಾಡದಿರುವಂತೆ ವಿನಂತಿಸಿಕೊಳ್ಳುವುದಕ್ಕಾಗುವುದಿಲ್ಲವೇ?'' ಅಂತ ಕೇಳಿದ.

''ಅವರನ್ನು ಭೇಟಿ ಮಾಡಿದ್ದೆ. ಬಹಳ ಸಹಾನುಭೂತಿಯಿಂದ ನನ್ನ ಅಹವಾಲನ್ನು ಕೇಳಿಸಿಕೊಂಡರು. ಅನಂತರ, ''ನೋಡು ವಿನಾಯಕ್, ನಾನು ನಿನ್ನ ಮಾತಿಗೆ ಒಪ್ಪಿ ಭಾಷಣ ರದ್ದು ಮಾಡುತ್ತೇನೆ ಅಂತ ಇಟ್ಟುಕೋ. ಉರುಸ್‌ಗೆ ಹೆದರಿ ಭಾಷಣ ರದ್ದು ಮಾಡಿದರು ಅಂತ ಪ್ರತಿಪಕ್ಷದವರು ಪ್ರಚಾರ ಮಾಡಲ್ಲ ಅಂತ ಯಾವ ಗ್ಯಾರಂಟಿ?'' ಅಂತ ಕೇಳಿದರು. ಅವರ ಪ್ರಶ್ನೆಗೆ ನನ್ನ ಬಳಿ ಉತ್ತರ ಇರಲಿಲ್ಲ'' ಎಂದ ವಿನಾಯಕ್.

''ಒಳ್ಳೇ ಸಂದಿಗ್ಧ ಪರಿಸ್ಥಿತಿ ವಳಗ ಸಿಕ್ಯಾನೆ ನಮ್ಮ ವಿನಾಯಕ. ನಿಮ್ಮ ಬಾಣ ಪ್ರಯೋಗಿಸಿ ಇದನ್ನ ಪರಿಹರಿಸ್ರಲಾ ಶರ-ಲೇಖ ಸಾಯೇಬ್ರ'' ಅಂತ ಉಳ್ಳಾಗಡ್ಡಿ ಪನ್ ಮಾಡಿದ ನಂತರ, ಶರಲೇಖ ತನ್ನ ಪ್ರಯತ್ನವನ್ನು ಮಾಡುವೆನೆಂದು ಅವರಿಬ್ಬರಿಗೆ ಭರವಸೆ ನೀಡಿ ಅವರನ್ನು ಸಾಗಿಹಾಕಿದ. ಉಳ್ಳಾಗಡ್ಡಿ ಹೊರಟ ತಕ್ಷಣ ಶರಲೇಖ, ''ನಾಳೇನೇ ನಾವು ಚಿಕ್ಕಮಗಳೂರಿಗೆ ಹೊರಟು ಪರಿಸ್ಥಿತಿಯ ಪರಿಶೀಲನೆ ಮಾಡಬೇಕು. ಜನಗಳ ಮನಸ್ಥಿತಿಯನ್ನು ತಿಳಿಯಬೇಕಾದರೆ ಜೊತೆಗೆ ಯಾರಾದರೂ ಪತ್ರಿಕಾ ವರದಿಗಾರರಿದ್ದರೆ ಚೆನ್ನ. ನಿನ್ನ ಗೆಳೆಯನ ಮಗಳು ನಮ್ಮೊಂದಿಗೆ ಒಂದೆರಡು ದಿನಗಳ ಮಟ್ಟಿಗೆ ಬರಕ್ಕಾಗುತ್ತದೆಯೇ ವಿಚಾರಿಸು'' ಅಂತ ಹೇಳಿ ಮಲಗಲು ಹೊರಟ. ಮಾರನೆಯ ಬೆಳಗ್ಗೆ ನಾನು ಸುಧಾಳಿಗೆ ಫೋನ್ ಮಾಡಿ ಅವಳ ಅನುಕೂಲ ಕೇಳಿದೆ. ''ಓಹೋ ಖಂಡಿತ ಬರುತ್ತೇನೆ. ಶರಲೇಖ ಅಂಕಲ್ ಜೊತೆ ಓಡಾಡಿ ಅವರಿಂದ ಕಲಿಯೋದು ಬಹಳ ಇದೆ'' ಅಂತ ಹೇಳಿದಳು. ಅಂದು ಮಧ್ಯಾಹ್ನ ನಾವು ಮೂರು ಜನ ವಿನಾಯಕ್ ವ್ಯವಸ್ಥೆ ಮಾಡಿದ್ದ ಕಾರೊಂದರಲ್ಲಿ ಚಿಕ್ಕಮಗಳೂರಿನ ಕಡೆಗೆ ಪ್ರಯಾಣ ಬೆಳೆಸಿದೆವು.

ಚಿಕ್ಕಮಗಳೂರು ಸೇರಿದಾಗ ಸಂಜೆ ನಾಲ್ಕು ಘಂಟೆ ಆಗಿತ್ತು. ಆ ಊರಿನ ಕಡೂರು ಕ್ಲಬ್ಬಿನಲ್ಲಿ ನಮ್ಮ ಬಿಡಾರ. ಬ್ರಿಟಿಷರ ಕಾಲದ ಕ್ಲಬ್ಬು, ಅಂದಿನ ದಿನಗಳ ಪರಂಪರೆಯನ್ನ ಹಾಗೇ

ಉಳಿಸಿಕೊಂಡು ಬಂದ ಹಾಗೆ ಕಾಣಿಸಿತು. ಹಳೆಯ ಕಾಲದ ಹೆಂಚಿನ ಕಟ್ಟಡ. ಒಳಗೆ ಊಟದ ಹಜಾರದಲ್ಲಿ ಹದಿನೆಂಟು ಕುರ್ಚಿಗಳನ್ನು ಸುತ್ತ ಅಳವಡಿಸಿದ ಉದ್ದನೆಯ ತೇಗದ ಮರದ ಮೇಜು. ಗೋಡೆಯ ಮೇಲಿನಿಂದ ನಮ್ಮನ್ನು ತುಚ್ಛೀಕಾರ ಭಾವದಿಂದ ನೋಡುತ್ತಿದ್ದ ಕಾಡುಕೋಣನ ತಲೆ. ಟಿಪ್‌ಟಾಪ್ ಆಗಿದ್ದ ಸಹಾಯಕರ ಜರ್ಬಾದ ಡವಾಲಿ ಉಡುಪನ್ನು ನಮ್ಮ ಪ್ಯಾಂಟು ಷರಟಿಗೆ ಹೋಲಿಸಿಕೊಂಡಾಗ ಸ್ವಲ್ಪ ನಾಚಿಕೆಯೇ ಆಯಿತು ಅನ್ನಿ. ಶರಲೇಖ ಸುಧಾಳಿಗೆ ಆದಷ್ಟು ಜನಗಳನ್ನು ಭೇಟಿಮಾಡಿ ಊರಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಅಭಿಪ್ರಾಯ ಸಂಗ್ರಹಣೆ ಮಾಡಲು ಹೇಳಿದ. ''ನೋಡಮ್ಮಾ, ಈಗ ಉದ್ಭವಿಸಿರೋ ಸಮಸ್ಯೇನ ಪರಿಹರಿಸುಕ್ಕೆ ನನಗೆ ಮೊಟ್ಟಮೊದಲಿಗೆ ಜನಾಭಿಪ್ರಾಯ ಹೇಗಿದೆ ಅನ್ನುವ ಮಾಹಿತಿ ಅಗತ್ಯ. ಆದಷ್ಟು ಹೆಚ್ಚು ಊರಿನ ಜನರನ್ನು ಇವತ್ತು ಮತ್ತೆ ನಾಳೆ ಭೇಟಿ ಮಾಡಿ ಅವರ ಅಭಿಪ್ರಾಯ ಸಂಗ್ರಹಿಸು. ನಾನು ಮತ್ತು ಶರಲೇಖ ಬಾಬಾಬುಡನ್‌ಗಿರಿಯಲ್ಲಿರುವ ದತ್ತ ಪೀಠಕ್ಕೆ ಹೋಗಿ ಅಲ್ಲಿನ ಪರಿಸರವನ್ನು ಪರಿಶೀಲಿಸುತ್ತೇವೆ. ನಾಳೆ ಸಂಜೆಯ ಹೊತ್ತಿಗೆ ಎಲ್ಲರೂ ಒಟ್ಟಿಗೆ ಕಲೆತು ಮುಂದಿನ ಹೆಜ್ಜೆ ನಿರ್ಧರಿಸೋಣ'' ಎಂದ ಶರಲೇಖ. ಸುಧಾ ಬಹು ಉತ್ಸಾಹದಿಂದ ಜಿಗಿಯುತ್ತಾ ತನ್ನ ಕೆಲಸ ಮಾಡಲು ಊರೊಳಕ್ಕೆ ಹೊರಟಳು.

ನೆಲದ ಮಟ್ಟದಲ್ಲಿ ಎಷ್ಟು ಸೆಖೆ ಇದ್ದರೂ ಗಿರಿಯ ಮೇಲೆ ತಂಪಾದ ಹವೆ ಇತ್ತು. ದತ್ತ ಪೀಠ ಸೇರಿದ ಮೇಲೆ ಶರಲೇಖ ಅಲ್ಲಿನವರೊಂದಿಗೆ ಮಾತುಕತೆಗಳನ್ನಾಡಲು ಒಳಕ್ಕೆ ಹೋದ. ನಾನು ಹೊರಗೆ ನಿಂತು ಅಲ್ಲಿನ ಷೋಲ ಕಾಡುಗಳ ರಮಣೀಯತೆಯನ್ನು ಸವಿಯತೊಡಗಿದೆ. ಸಂಜೆ ನಮ್ಮ ಬಿಡಾರಕ್ಕೆ ಹಿಂತಿರುಗುತ್ತಿರುವಾಗ ನನಗೆ ಬೆಂಗಳೂರಿನಿಂದ ತುರ್ತಿನ ಕರೆಯೊಂದು ಬಂದಿದ್ದರಿಂದ ಅಂದು ರಾತ್ರಿ ಬಸ್ಸಿನಲ್ಲಿ ನಾನು ಬೆಂಗಳೂರಿಗೆ ಹಿಂತಿರುಗಬೇಕಾಯಿತು. ನಾನು ಬೆಂಗಳೂರು ಸೇರಿದ ಮಾರನೆಯ ದಿನ ಸಾಯಂಕಾಲದ ವೇಳೆಗೆ ಶರಲೇಖ ಬೆಂಗಳೂರಿಗೆ ಹಿಂತಿರುಗಿದ. ಫ್ಲಾಟಿನೊಳಗೆ ಬರುತ್ತಲೇ ಶರಲೇಖ ನನ್ನ ಕಡೆಗೆ ಚಿಕ್ಕಮಗಳೂರಿನ ಒಂದು ವಾರ್ತಾಪತ್ರಿಕೆಯನ್ನು ಎಸೆದ. ದ್ರಾವಿಡ್ ತರಹ ಅದನ್ನು ಕ್ಯಾಚ್ ಹಿಡಿದು ಪುಟ ತೆರೆದು ನೋಡಿದೆ. ಮೊದಲ ಪುಟದಲ್ಲೇ ಒಂದು ವಿಶೇಷ ಪ್ರಕಟಣೆ ಇತ್ತು.

**ವಿಶೇಷ ಪ್ರಕಟಣೆ**

**ಹಕ್ಕಿ ಜ್ವರದ ಸಾಂಕ್ರಾಮಿಕ ಸಂಭವ**

**ಸಭೆ, ಸಮೂಹಗಳ ನಿಷೇಧ. ಆರೋಗ್ಯ ಇಲಾಖೆಯ ತುರ್ತು ಕ್ರಮ**

ಇಲ್ಲಿನ ಪ್ರಾರ್ಥಮಿಕ ಆರೋಗ್ಯ ಕೇಂದ್ರಕ್ಕೆ ಬಂದ ಮಹಿಳೆಯೊಬ್ಬರು ಇತ್ತೀಚೆಗೆ ಹಾಂಕಾಂಗಿನಿಂದ ಹಿಂತಿರುಗಿದ್ದು ಹಕ್ಕಿ ಜ್ವರದ ಚಿನ್ಹೆಗಳನ್ನು ಹೊಂದಿದ್ದದ್ದು ಪತ್ತೆಯಾಗಿದೆ. ಇದಕ್ಕೆ ಮುಂಚೆ ಅವರು ತಮ್ಮ ವೃತ್ತಿಯ ಕಾರಣದಿಂದಾಗಿ ಸಾವಿರಾರು ಮಂದಿ ಊರಿನವರನ್ನು ಸಂಪರ್ಕಿಸಿದ್ದರಿಂದ ಹಕ್ಕಿ ಜ್ವರ ಅನೇಕರಿಗೆ ತಗುಲಿರುವ ಶಂಕೆ ಇದೆ. ಹಾಗಾಗಿ ಆಕೆಯ ರಕ್ತ ಪರಿಶೀಲನೆಯ ಫಲಿತಾಂಶ ಬರುವವರೆಗೂ ಒಂದುವಾರಗಳ ಕಾಲ ಊರಿನಲ್ಲಿ ಸಭೆ, ಜನಸಮೂಹಗಳ ನಿಷೇಧ. ಜನರ ಆರೋಗ್ಯದ ದೃಷ್ಟಿಯಿಂದ ಮಾಡಿರುವ ಈ ನಿಷೇಧಾಜ್ಞೆಗೆ ಎಲ್ಲರ ಸಹಕಾರ ಕೋರಿದೆ.

ನಾನು ತಲೆಯೆತ್ತಿ ಶರಲೇಖನನ್ನು ನೋಡಿದೆ. ಒಂದು ಒಳ್ಳೇ ಆಟವನ್ನು ಗೆದ್ದ ಕಳೆ ಅವನ ಮುಖದ ಮೇಲಿತ್ತು. ಎಂದಿನಂತೆ ಆತ ತನ್ನ ವಿವರಣೆಯನ್ನು ನೀಡಲು ಮುಂದಾದ.

''ವಿನಾಯಕನ ಸಮಸ್ಯೆ ನನಗೆ ಎದುರಾದ ತಕ್ಷಣ ಇದರ ಪರಿಹಾರಕ್ಕೆ ಸುಧಾಳ ಪಾತ್ರ ಅತಿಮುಖ್ಯ ಅಂತ ಅನ್ನಿಸಿತು. ಅದಕ್ಕೇ ನಿನಗೆ ಹೇಳಿ ಆಕೆಯ ಸಹಾಯ ಕೋರಿದೆ. ಚಿಕ್ಕಮಗಳೂರಿನಿಂದ ಆ ರಾತ್ರಿ ನೀನು ಹಿಂತಿರುಗಿದ ಮೇಲೆ ನಾನು ವಿನಾಯಕನನ್ನು ಭೇಟಿ ಮಾಡಿ ನನ್ನ ಹಂಚಿಕೆ ತಿಳಿಸಿದೆ. ಮಾರನೆಯ ಸಂಜೆ ಸುಧಾ ಆ ಊರಿನ ಪ್ರಾರ್ಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಕೆಮ್ಮು ಗಂಟಲು ನೋವು ಮೈಕೈ ನೋವು ಇದೆ. ಜ್ವರ ಏನೂ ಇಲ್ಲ. ಆದರೆ ನಾನು ಈಚೆಗೆ ಹಾಂಕಾಂಗಿನಿಂದ ಹಿಂತಿರುಗಿ, ಇಲ್ಲಿ ಸಾವಿರಾರು ಜನಗಳನ್ನು ಸಂಪರ್ಕಿಸಿರುವುದರಿಂದ ಜನಗಳ ಕ್ಷೇಮಕ್ಕಾಗಿ ನಿಮ್ಮಲ್ಲಿಗೆ ಬಂದಿದ್ದೇನೆ ಅಂತ ಬಹು ಮುಗ್ಧವಾಗಿ ತಿಳಿಸಿದಳು. ಅಲ್ಲಿನ ಅಧಿಕಾರಿಗಳಿಗೆ ನಿಜವಾಗಲೂ ಗಾಬರಿ. ಕೆಲವೇ ದಿನಗಳಲ್ಲಿ ಉರುಸ್ ಬೇರೆ. ಅವಳನ್ನು ಅಲ್ಲಿಯೇ ಇರಲು ಹೇಳಿ ರಕ್ತದ ಸ್ಯಾಂಪಲ್ ತೆಗೆದುಕೊಂಡು ಸಾಂಕ್ರಮಿಕ ರೋಗದ ಕೇಂದ್ರಕ್ಕೆ ಕಳುಹಿಸಿದರು. ತಕ್ಷಣ ಆರೋಗ್ಯ ಇಲಾಖೆಯ ವತಿಯಿಂದ ಈ ನಿಷೇಧಾಜ್ಞೆಯನ್ನು ಜಾರಿಗೊಳಿಸಿದರು. ರಕ್ತ ಪರಿಶೀಲನೆಯ ಫಲಿತಾಂಶ ಬರುವವರೆಗೂ ಸುಧಾ ಒಂದು ವಾರ ಸ್ಥಳೀಯ ಆಸ್ಪತ್ರೆಯಲ್ಲೇ ಕ್ವಾರಂಟೀನಿನಲ್ಲಿ ಇರಬೇಕಾಗಿದೆ. ವಿನಾಯಕ ಅವಳ ಶುಶ್ರೂಷೆಯನ್ನು ಬಹು ಮುತುವರ್ಜಿಯಿಂದ ಮಾಡುತ್ತಿದ್ದಾನೆ ಅಂತ ಉಳ್ಳಾಗಡ್ಡಿ ಹೇಳಿದರು'' ಅಂದ ಶರಲೇಖ.

''ತನ್ನ ಸಮಸ್ಯೆಯನ್ನ ಪರಿಹಾರ ಮಾಡಿದ ಪುಣ್ಯಾತ್ಗಿತ್ತಿಗೆ ಅಷ್ಟೂ ಸಹಾಯ ಮಾಡಬೇಡವೇ!'' ಅಂತ ನಾನು ಕುಹಕವಾಡಿದೆ.

**

## ನಮ್ಮ ಉಪಸಂಪಾದಕರಿಗೆ
## ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ

ಬೇಲೂರು ರಾಮಮೂರ್ತಿಯವರ ಇತ್ತೀಚೆಗೆ ಬಿಡುಗಡೆಯಾದ ಹಾಸ್ಯ ಗಂಗೋತ್ರಿ ಹಾಸ್ಯ ಸಂಕಲನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ದಿ. ಡಿ. ಮಾಣಿಕರಾವ್ ಸ್ಮಾರಕ ದತ್ತಿ ನಿಧಿ ಪ್ರಶಸ್ತಿ ಲಭಿಸಿದೆ. ಜುಲೈ 2 ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಅಪರಂಜಿಯ ಎಲ್ಲ ಓದುಗರ ಪರವಾಗಿ ಅಪರಂಜಿ ಸಂಪಾದಕ ಮಂಡಳಿ ಮತ್ತು ಕೊರವಂಜಿ ಅಪರಂಜಿ ಟ್ರಸ್ಟ್ ಬೇಲೂರರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ.

**ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಲೇಖನ**

# ಎಂದು ಏಕಾದಶಿ?

**- ವಿ. ಪ್ರಾಣೇಶ್ ರಾವ್**

'ಲಕ್ಷ್ಮೀ...'

'ಏನ್ರೀ...'

'ಎಲ್ಲಿ ಪಂಚಾಂಗನೇ ಕಾಣ್ತಾ ಇಲ್ವಲ್ಲೇ.'

'ಅಲ್ಲೇ ದೇವರ ಮನೇಲಿ ಇರಬೇಕು ನೋಡಿ.'

'ಇಲ್ಲ, ಇಲ್ಲಿಲ್ಲ. ಈ ಮನೇಲಿ ಯಾವ ಸಾಮಾನೂ ಅದರ ಸ್ಥಳದಲ್ಲಿ ಇರೋಲ್ಲ.'

'ನೋಡಿ ನನಗೀಗ ಕೈ ಪುರಸೊತ್ತಿಲ್ಲ. ಅಲ್ಲೇ ಇರಬೇಕು. ನೀವೇ ನೋಡಿಕೊಳ್ಳಿ...'

'ನಿನ್ನೆ ಪುರೋಹಿತರು ಬಂದಾಗ ಅವರಿಗೆ ಕೊಟ್ಟಂಗಿತ್ತು. ಮತ್ತೆ ಅವರೆಲ್ಲಾದರೂ ಒಯ್ದ್ರೋ ಹ್ಯಾಗೆ..'

'ಏನ್ರೀ ನಿಮ್ಮ ರಾಮಾಯಣ. ನಾನೇ ಬಂದೆ ಇರಿ, ನಿಮಗಂತೂ ಅಲ್ಲೇ ಇದ್ರೂ ನೋಡೋಕೇ ಗೊತ್ತಾಗಲ್ಲ...'

'ಇಲ್ವಲ್ರೀ... ಇಲ್ಲೆಲ್ಲೂ ಕಾಣ್ತಾಯಿಲ್ಲ. ಅಂದ್ಹಾಗೆ ಪಂಚಾಂಗ ಯಾಕೆ ಬೇಕಾಗಿತ್ತೀಗ?'

'ಅಲ್ವೇ ಎಂದು ಏಕಾದಶಿ ಅಂತ ಗೊತ್ತಾಗ್ತಾನೇ ಇಲ್ಲ. ಈ ಕ್ಯಾಲೆಂಡರುಗಳಲ್ಲೋ ಅಂಥದೊಂದೂ ಕೊಡೋಲ್ಲ. ಕೊಟ್ಟರೂ ತಿಥಿಲೋಪ ಗೊತ್ತಾಗಲ್ಲ. ನಮ್ಮ ಮಠದ್ದೇ ಆದರೆ ಪ್ರಶಸ್ಥ ನೋಡು. ಈಗ ಪಂಚಾಂಗ ಒಂದು ಸಿಕ್ಕು ಬಿಟ್ರೆ ಮನಸ್ಸಿಗೆ ನಿರಾಳ ಆಗ್ತದೆ ನೋಡು ಮತ್ತೆ...'

'ಒಂದು ಕೆಲಸ ಮಾಡ್ರಿ, ಗೂಡಾಚಾರ್ರಿಗೆ ಒಂದು ಫೋನ್ಹಾಕಿ. ವಾರ ತಿಥಿ ನಕ್ಷತ್ರ ಸ್ಪಷ್ಟ ಹೇಳ್ಬಿಡ್ತಾರೆ.'

'ಹೌದು ನೋಡು ಹಾಗೆ ಮಾಡೋದೇ ಸರಿ ಅನ್ಸುತ್ತೆ..'

'ಇಲ್ಲಿ ಕ್ಯಾಲೆಂಡರಿತ್ತಲ್ಲ ಅದೂ ಕಾಣ್ತಾನೇ ಇಲ್ವಲ್ಲೇ!'

'ಅಲ್ರಿ ಗೂಡಾಚಾರ್ರಿಗೆ ಫೋನ್ ಹಾಕಿ ಅಂದ್ರೆ ಕ್ಯಾಲೆಂಡರ್ ಬೇಕೂ ಅಂತೀರಲ್ಲ...'

'ಆ ಕ್ಯಾಲೆಂಡರ್ ಮೇಲೇ ಗೂಡಾಚಾರ್ರ ಫೋನ್ ನಂಬರ್ ಬರೆದಿದ್ದೆ.. ಅದೊಂದು ಸಿಕ್ಕುಬಿಟ್ರೆ...'

'ಇರಿ ಹಾಲಿನ ಲೆಕ್ಕ ಮಾಡೋಣಾಂತ ನಾನೇ ಕ್ಯಾಲೆಂಡರ್‌ನ ಅಡಿಗೆ ಮನೆಗೆ ತಗೊಂಡು ಹೋಗಿದ್ದೆ..'

'ತಂದ್ಯಾ...'

'ಬಂದೆ. ಎಷ್ಟ್ ಔಸ್ರ ಮಾಡ್ತೀರಿ ನೀವು. ಇಲ್ಲಿದೆ ನೋಡಿ ಗೂಡಾಚಾರ್ರ ನಂಬರ್ರು.'

‘ಹಲೋ ಗೂಡಾಚಾರ್ರೆ ಏಕಾದಶಿ ಎಂದಾಗ್ತದೆ ಅಂತ ನೋಡಿ ಹೇಳ್ತೀರಾ. ಇಲ್ಲಿ ಮನೆಯಲ್ಲಿ ಪಂಚಾಂಗನೇ ಸಿಗ್ತಾ ಇಲ್ಲ. ಅದಕ್ಕೇ ಫೋನ್ ಮಾಡ್ದೆ..’

‘ಹಲೋ ಸಾರ್ ನಾನು ಗೂಡಾಚಾರಿ ಅಲ್ಲ. ಒಮರ್ ಷರೀಫ್ ಮಾತಾಡ್ತಾ ಇರೋದು... ಆದರೆ ಫೋನ್ ಇಡಬೇಡಿ. ನಾನೇ ಹೇಳ್ತೀನಿ. ಏಕಾದಶಿ ಎಂದೂ ಅಂತ.’

‘ನಿಮಗೇನ್ ಗೊತ್ತು ಏಕಾದಶಿ ತಿಥಿ. ಅದೇನೋ ಹೇಳ್ತಾರಲ್ಲ ಗೋಕುಲಾಷ್ಟಮಿಗೂ ಇಮಾಮ್ ಸಾಬಿಗೂ ಎಲ್ಲಿಂದೆಲ್ಲಿಯ ಸಂಬಂಧ ಅಂತ..’

‘ಅದೇ ಸಮುದ್ರದ ಉಪ್ಪಿಗೂ ಬೆಟ್ಟದ ನೆಲ್ಲಿಗೂ ಎತ್ತಣಿಂದೆತ್ತ ಸಂಬಂಧವಯ್ಯ ಅಂತ ಇದೆಯಲ್ಲ ಸಾರ್ ಹಾಗೇ ಅಲ್ವೇ.’

‘ಈ ವಚನದ ಸಾಲು ನಿಮಗೆ ಹೇಗೆ ಗೊತ್ತು ಸಾಹೇಬ್ರೆ. ಖುರಾನ್ ಆದ್ರೆ ಹೇಳ್ತೀರಿ ಇದು ಹೇಗೇ...’

‘ನಿಮ್ಮೊದ್ಕೆ ಮೂಗು ಯಾಕೆ ಎಳಿತೀರಿ ಸಾಬ್? ನಾನು ಡಿಪ್ಲೋಮಾ ಇನ್ ಕನ್ನಡ ಪಾಸು ಮಾಡಿದ್ದೇನೆ ಗೊತ್ತೋ.’

‘ಮಾಫ್ ಕರ್ನಾಜಿ. ನಿಮಗೆ ಏಕಾದಶಿ ಹ್ಯಾಗೆ ಗೊತ್ತಾಯ್ತು?! ಯಾವುದಾದರೂ ಕ್ಯಾಲೆಂಡರ್ನಲ್ಲಿ ನೋಡಿದಿರಾ ಹೇಗೆ..?’

‘ಯಾವ ಕ್ಯಾಲೆಂಡರೂ ಇಲ್ಲ ಮಣ್ಣು ಇಲ್ಲ ಸಾಬ್. ನಿನ್ನೆ ಸಂಜೆ ಏನಾಯ್ತಂದ್ರೆ ರಾಮಾಚಾರ್ರು ಗೂಡಾಚಾರ್ರು ನಮ್ ಮನೆ ತಾವ್ಕೆ ಬಂದಿದ್ರು...’

‘ಬಂದಿದ್ರೆ ಏನಾಯ್ತು..?’

‘ಅಲ್ಲೇ ಇರೋದು ಗಮ್ಮತ್ತು ಸಾಬ್. ಅವರು ಇಬ್ರು ಏಕಾದಶಿ ಎಂದು ಆಗ್ತದೇ ಅಂತ ಡಿಸ್ಕರ್ಸ್ ಮಾಡ್ತಿದ್ರು. ನಂಗೂ ಕುತೂಹಲ ಅನ್ನಿಸ್ತು ಕೇಳಿಸ್ಕಂಡೇ..’

‘ಏನ್ ಕೇಳಿಸ್ಕಂಡ್ರಿ. ನನಗೂ ಅಷ್ಟು ಹೇಳ್ರಿ ಸಾಹೇಬ್ರೇ.’

‘ಅದಕ್ಕೇ ನಿಮಗೆ ಫೋನ್ ಇಡಬೇಡ್ರಿ ಅಂತ ಹೇಳಿದ್ದು...’

‘ಹಲೋ ಹೇಳಿ. ಯಾಕೆ ಫೋನ್ ಕಟ್ ಮಾಡಿದ್ರಿ...’

‘ಇಲ್ಲ ಸಾಬ್ ಮಾತು ಮುಂದಕ್ಕೆ ಕೇಳಿ. ಏಕಾದಶಿ ನಾಳೆ ಅಂತೆ ಸಾಬ್. ಉತ್ತರಕ್ಕೆ ನಿಮ್ದು ಒಂದ್ ಮಠ ಇದೆಯಲ್ಲ ಸಾಬ್. ಅದರ್ದು ಹೆಸರು...’

‘ಅದೇ ಉತ್ತರಾಧಿ ಮಠ ಅಂತ ಹೆಸರು..’

‘ಅದರ್ದು ಮತ್ತು ರಾಘವೇಂದ್ರ ಸ್ವಾಮಿ ಮಠದ್ದು ಏಕಾದಶಿ ನಾಳೆ ಅಂತೆ. ನಾಡಿದ್ದಿಗೆ ಮುಂಜಾನೆ ಊಟ ಮಾಡ್ಬೇಕಂತೆ. ಅದೇ ನಾವು ರಮ್ಜಾನ್ದಾಗೆ ಮಾಡ್ತೀವಲ್ಲ ಮುಂಜಾನೆ ಊಟ ಅಂಗೆ...’

‘ಬಿಲ್‌ಕುಲ್ ಸರೀಗೆ ಹೇಳಿದ್ರಿ ಸಾಹೇಬರೇ...’

‘ಅಂದ್ಮ್ಯಾಕೆ ನಮ್ದೂಕೆ ನಿಮ್ದೂಕೆ ಯಾವ್ದೂ ಫರಕ್ಕಿಲ್ಲ ಅಂದಂಗಾತಲ್ಲ ಜವಾಬ್...’

'ಹೌದು ಹೌದು ನಾವು ಕೆಲವರು ಪೀರ್ಲು ದೇವ್ರಿಗೆ ಸಕ್ರೀ ಊದುಸ್ತೀವಿ. ನಿಮ್ಮಲ್ಲಿ ಕೆಲವ್ರು ಊರ ಆಂಜನೇಯ ಸ್ವಾಮಿಗೆ ನಡಕಂತಾರೆ...'

'ಹೌದು ಸಾಬ್.... ಅಂದ್ವಾಗೆ ಮೊನ್ನೆ ನಮ್ದು ಹುಡುಗ ಇದ್ದು ಭಾಗ್ಯದ ಲಕ್ಷ್ಮೀ ಬಾರಮ್ಮ ಹಾಡ್ತಿದ್ದ. ನೀನ್ಯಾಕೊ ಆ ಬ್ರಾಮಿನ್ಸ್ ಹಾಡು ಹಾಕ್ತಿ ಅಂದಿದ್ದಕ್ಕೆ ಅವ್ನು ಏನ್ ಹೇಳ್ದ ಗೊತ್ತಾ ಸಾಬ್. ದುಡ್ಡು ಯಾರಿಗೆ ಬ್ಯಾಡ ಅಬ್ಬಾಜಾನ್. ದುಡ್ಡು ಇದ್ರೆ ಚೈನಿ ಮಾಡ್ಬೌದು. ದುಬೈಗೆ ಮಸ್ಕತ್‌ಗೆ ಓಗ್ಬೌದು, ಒಂದ್ ಬಿಟ್ ನಾಕ್ ಶಾದಿ ಮಾಡ್ಕೊಬೌದು... ಎಂಥಾ ಕಿಲಾಡಿ ಇದಾನೆ ನೋಡಿ.'

'ಹುಡುಗ ಬರಾಬರ್ ಹೇಳಿದಾನೆ. ಅಲ್ಲ ಸಾಹೇಬ್ರೇ ನಿಮ್ಗೆಲ್ಲ ಇದರಲ್ಲಿ ಇಂಟರೆಸ್ಟ್ ಹ್ಯಾಗೆ ಬಂತು?!...'

'ಇಟೀಸ್ ವೆರಿ ಸಿಂಪಲ್. ನಮ್ಮ ರಾಷ್ಟ್ರಪತಿ ಅಬ್ದುಲ್ ಕಲಾಂ ಸಾಹೇಬರಿದ್ದಾರಲ್ಲ ಅವ್ರು ರಾಮೇಶ್ವರದಾಗೆ ಬ್ರಾಮಿನ್ಸ್ ಓಣಿನಾಗೆ ಬೆಳೆದಿದ್ದಂತೆ. ಅವ್ರು ಅದೆಷ್ಟ್ ದೊಡ್ಡ ವ್ಯಕ್ತಿ ಆದ್ರೂ ನೋಡಿ... ನಾವೂ ಬ್ರಾಮಿನ್ ಓಣಿಯಲ್ಲೇ ಇರೋದು. ಅದಕ್ಕೆ ನಿಮ್ ಜನದ್ದು ಸಾವಾಸ ನಮ್ದೂಕೆ ಐತೆ. ನಮ್ ಹುಡುಗ್ರಿಗೂ ಅದನ್ನೇ ಹೇಳ್ತಿರ್ತೀನಿ ಸಾಬ್, ನೀವೂ ಅಬ್ದುಲ್ ಕಲಾಂ ಸಾಹೇಬ್ರಂತೆ ದೊಡ್ಡ ವ್ಯಕ್ತಿ ಆಗ್ಬೇಕೂಂತ...'

'ಆಯ್ತು ನೀವೂ ನಮ್ಮ ಪ್ರೆಸಿಡೆಂಟ್ ಆಗ್ಬಿಡ್ರಿ ಸಾಹೇಬ್ರೇ.'

'ಓ ದೊಡ್ಮಾತು ಆಚಾರಿ ಸಾಬ್. ಶುಕ್ರಿಯಾ ಶುಕ್ರಿಯಾ...'

ಫೋನ್ ಕಟ್ಟಾಯಿತು.

ಮತ್ತೆ ಸ್ವಲ್ಪ ಹೊತ್ತಿನಲ್ಲಿ ಫೋನ್ ರಿಂಗಾಯಿತು.

'ಹಲೋ ಯಾರು ಮಾತಾಡೋದು.'

'ನಾನು ಷರೀಫ್ ಮಾತಾಡೋದು. ಆಚಾರ್ ಸಾಬ್ ಮಾಫ್ ಕರ್ನಾ.'

'ಪರವಾಗಿಲ್ಲ ಅದೇನು ಹೇಳಿ.'

'ತಾವು ಒಂದ್ಸಲ ನಮ್ಮ ಇಫ್ತಾರ್ ಕೂಟಕ್ಕೆ ಯಾಕೆ ಬರಬಾರ್ದು? ಅಲ್ಲಿ ಪ್ಯೂರ್ ಸಸ್ಯಾಹಾರ – ಶಾವಿಗೆ, ಖರ್ಜೂರ, ಹಾಲು ಹಣ್ಣು ತಗೋಬೋದಲ್ಲ. ಪುರಂದರ ದಾಸರು ಹೇಳ್ಯಾರೆ, ತುರುಕರು ಕರೆದರೆ ಉಣಬಹುದಣ್ಣ ಅಂತ ಅದಕ್ಕೇ..'

'ಅದು ಹಾಗಲ್ಲ ಸಾಹೇಬ್ರೇ. ಪುರಂದರದಾಸರ ಅರ್ಥ ಹಸು ಹಾಲು ಕರೆದರೆ ಉಣಬಹುದು ಅಂತ.'

'ಅರೆ ಇಸ್ಕಿ ನನಗೆ ಅರ್ಥಾನೆ ಆಗಲಿಲ್ಲ. ಗಲ್ತಿ ಹೋಗಯಾ ಸಾಬ್ ಮಾಫ್ ಕರ್ನಾ...'

'ಇರ್ಲಿ ಪರವಾಗಿಲ್ಲ. ಬೇಜಾರು ಮಾಡ್ಕೊ ಬ್ಯಾಡ್ರಿ. ನೀವು ಪ್ರೆಸಿಡೆಂಟಾಗ್ರಿ ನಿಮ್ ಮನೆಗೆ ಅಂದ್ರೆ ರಾಷ್ಟ್ರಪತಿ ಭವನಕ್ಕೆ ಊಟಕ್ಕೆ ಬರ್ತೀನಿ...' ಎಂದು ಆಚಾರ್ರು ಫೋನ್ ಕಟ್ ಮಾಡ್ಬಿಟ್ರು.

⁂

ಮುಂಗಾರು ಸ್ಪೆಷಲ್

# ಹವಾಮಾನ ವರದಿ

**- ಸಿ.ಆರ್. ಸತ್ಯ**

**ಜೂ**ನ್ ಬಂದರೆ ನಮಗೆಲ್ಲ ಮಳೆ ಬರುತ್ತದೆಯೋ ಇಲ್ಲವೋ ಎನ್ನುವುದೇ ಯೋಚನೆ. ಮುಂಗಾರಿನ ಮುನ್ಸೂಚನೆ ಹೇಗಿದೆ ಅಂತ ತಿಳಿಯೋದಕ್ಕೆ ನಮ್ಮ ಮನೆ ಹತ್ತಿರದಲ್ಲಿರೋ ಮುಂಗಾರು ಮಳೆ ಮುನ್ಸೂಚನಾ ಸಂಸ್ಥೆಗೆ ಹೋಗಿ, ಅಲ್ಲಿಯ ನಿರ್ದೇಶಕರಾದ ಡಾ. ಮೇಘಶ್ಯಾಮ್ ಅವರನ್ನು ಭೇಟಿ ಮಾಡಿದಾಗ, ನಡೆದ ಮಾತುಕತೆಯನ್ನು ಕೆಳಗೆ ಒಪ್ಪಿಸಿದ್ದೀನಿ.

''ನಮಸ್ಕಾರ ಡಾ. ಮೇಘಶ್ಯಾಮ್ ಅವರೆ, ಈ ವರ್ಷ ಮುಂಗಾರು ಮಳೆ ಸಮರ್ಪಕವಾಗಿ ಇರುತ್ತೋ ಹೇಗೆ?''

''ಇರುವ ಸಾಧ್ಯತೆ ಏನೋ ಇದೆ''

**ಮುಂಗಾರು ಮಳೆ ಮುನ್ಸೂಚನಾ ಸಂಸ್ಥೆ ನಿರ್ದೇಶಕ ಡಾ. ಮೇಘಶ್ಯಾಮ್ ಅವರು ನೀಡಿರುವ ಮುನ್ನೋಟ ಇಲ್ಲಿದೆ.**

''ಅಥವಾ, ಕ್ಷೀಣವಾಗಿರುತ್ತೋ?''

''ಆ ಸಾಧ್ಯತೇನೂ ಇದೆ.''

''ಸಮಯಕ್ಕೆ ಸರಿಯಾಗಿ ಬರುತ್ತೋ ಹ್ಯಾಗೆ?''

''ಬರಬಹುದು, ಬರಬಹುದು''

''ಇಲ್ಲವೆ, ನಿಧಾನವಾಗಿ ಬರುತ್ತೋ?''

''ನಿಧಾನವಾಗಲೂಬಹುದು''

''ಮೋಡ ಕವಿದ ವಾತಾವರಣ...''

''ಮೋಡಗಳು ಬಂದರೆ, ಖಂಡಿತ ವಾತಾವರಣ ಕವಿದೇ ಕವಿಯುತ್ತೆ''

''ಅಥವಾ, ಬಿಸಿಲೂ...''

''ಮೋಡಗಳು ಇಲ್ಲದಿದ್ದರೆ, ಬಿಸಿಲಂತೂ ಗ್ಯಾರಂಟಿ''

''ಕರ್ನಾಟಕದ ಒಳಭಾಗದಲ್ಲಿ ಮಳೆ ಆಗುತ್ತೋ ಅಥವಾ ಹೊರಭಾಗದಲ್ಲಿ ಆಗುತ್ತೋ ಹ್ಯಾಗೆ?''

''ಅದರ ಬಗ್ಗೆ ನಮ್ಮ ಕಂಪ್ಯೂಟರ್ ಹೇಳೋದು, ಹೊರಭಾಗದಲ್ಲಿ ಆಗುತ್ತೆ. ಸ್ವಲ್ಪ ಒಳಕ್ಕೆ ಬಂದರೆ, ಒಳಭಾಗದಲ್ಲಿ ಆಗುತ್ತೆ. ಯಾಕೆ ಅಂದರೆ, ಯಾವಾಗಲೂ ಹೊರಗಿನಿಂದ ಅಲ್ಲವೆ ಏನಾದ್ರೂ ಒಳಗೆ ಬರೋಕ್ಕೆ ಆಗೋದು?''

''ಹಾಗಿದ್ದರೆ, ನಮ್ಮ ರೈತರು ನಿಟ್ಟುಸಿರುಬಿಡಬಹುದೆ?''

''ನಿಟ್ಟುಸಿರೂ ಬಿಡಬಹುದು, ಕೊನೆಯುಸಿರೂ ಬಿಡಬಹುದು''

''ಯಾಕೆ ಸಾರ್?''

''ಕಂಪ್ಯೂಟರ್‌ನಲ್ಲಿ ಏನಾದರೂ ವೈರಸ್ ಹತ್ತಿದ್ರೆ, ಒಂದೊಂದು ಸಲ ಅದು ಹಾಗೇ ಹೇಳುತ್ತೆ.''

‘‘ಹೋದ ವರ್ಷಕ್ಕೂ ಈ ವರ್ಷಕ್ಕೂ ಮಳೆಯ ಪ್ರಮಾಣದಲ್ಲಿ ಹೆಚ್ಚೂಕಮ್ಮಿ ಆಗೋ ಚಾನ್ಸಸ್ ಇವೆಯೇ?’’

‘‘ಖಂಡಿತ. ಮಳೆ ಬಂದರೆ, ಪ್ರಮಾಣ ಜಾಸ್ತಿಯಾಗುತ್ತೆ. ಮಳೆ ಬರದಿದ್ದರೆ, ಪ್ರಮಾಣ ಕಮ್ಮಿ ಆಗುತ್ತೆ.’’

‘‘ಸಿಡಿಲೂ ಗುಡುಗೂ ಇರಬಹುದೇ?’’

‘‘ಸಿಡಿಲಿದ್ದರೆ, ಗುಡುಗು ಇದ್ದೇ ಇರುತ್ತೆ. ಗುಡುಗು ಮಾತ್ರ ಇದ್ರೆ, ಸಿಡಿಲು ಇರೋದು ಚಾನ್ಸಸ್ ಕಡಿಮೆ.’’

‘‘ಏನಾದರೂ ಅತಿವೃಷ್ಟಿಯಿಂದ ಪ್ರವಾಹದ ಸಂಭವಗಳು ಇವೆಯೇ?’’

‘‘ಬೆಂಗಳೂರಿನ ರಸ್ತೆಗಳಂತೂ ಆಗೋದು ಗ್ಯಾರಂಟಿ.’’

‘‘ನದಿಗಳಲ್ಲಿ..?’’

‘‘ತುಂಬಾ ಮಳೆ ಬಿದ್ರೆ, ಆಗುತ್ತೆ, ಆಗುತ್ತೆ ಅಂತ ಕಂಪ್ಯೂಟರ್ ಅಂತೂ ಹೇಳ್ತಿದೆ.’’

‘‘ನಮ್ಮ ಜಲಾಶಯಗಳಲ್ಲಿ, ಈ ವರ್ಷ ನೀರು ತುಂಬುತ್ತದೆಯೇ?’’

‘‘ತುಂಗಭದ್ರ, ಹಾರಂಗಿ, ಅಲ್ಮಟ್ಟಿನಲ್ಲಿ ನೀರು ಹರಿದು ಬಂದರೆ, ಜಲಾಶಯಗಳು ತುಂಬುತ್ತವೆ–’’

‘‘ಕೆ.ಆರ್.ಎಸ್.ನಲ್ಲಿ...?’’

‘‘ನೀರು ಹರಿದು ಬಂದ್ರೂ ತುಂಬಲ್ಲ.’’

‘‘ಯಾಕೆ ಸಾರ್?’’

‘‘ನಮ್ಮ ಕಂಪ್ಯೂಟರ್ ಪ್ರಕಾರ, ಅದೆಲ್ಲಾನೂ ಜಯಲಲಿತಾ ತೊಗೊಂಡು ಬಿಡ್ತಾರಂತೆ.’’

ಇಷ್ಟು ಹೊತ್ತಿಗೆ, ನನಗೆ ಮೂರ್ಛೆ ಬರುವ ಹಾಗೆ ಆಯಿತು.

‘‘ಸಾರ್, ನನಗೆ, ಕುಡಿಯೋಕ್ಕೆ ಸ್ವಲ್ಪ ನೀರು ಕೊಡ್ತೀರಾ?’’ ಅಂತ ಬೇಡ್ಕೊಂಡೆ.

‘‘ಒಂದು ವಾರದಿಂದ ನಲ್ಲೀಲಿ ನೀರೇ ಇಲ್ಲ. ಮುಂದಿನ ತಿಂಗಳು ಮಳೆ ಬಂದರೆ ನಮಗೂ ಕುಡಿಯೋ ನೀರು ಸಿಗಬಹುದು. ಆವಾಗ ಬನ್ನಿ, ಒಂದು ಲೋಟದ ತುಂಬಾ ನೀರು ಕೊಡ್ತೀನಿ.’’

‘‘ಇದ್ಯೇನು ಸಾರ್... ಮಳೆ ಬಂದರೆ ಅಂತ ರಾಗ ಎಳೀತಿದೀರಲ್ಲ? ಹಾಗಾದ್ರೆ, ಮುಂಗಾರು ಬರೋದೇ ಇಲ್ಲವೆ?’’

‘‘ಬರುತ್ತೆ ಅಂತ ಗ್ಯಾರಂಟಿ ಕೊಡೋಕ್ಕೆ ನಾನೇನು ವರುಣ ಏನ್ರಿ? ಸಮಯ ಆಯ್ತು, ಹೊರಡಿ’’ ಮೇಲೆ ಹೇಳಿದಂತಹ ಸಮಗ್ರ ಕಂಪ್ಯೂಟರ್ – ಮೇಘಶ್ಯಾಮ್ ಅವರ ಮುನ್ಸೂಚನೆಗೆ ಅರ್ಥ ಗೊತ್ತಾಗಲೀ ಅಂತ, ಅವರ ಆಫೀಸಿನಿಂದ ಹೊರಬಂದು, ಒಂದು ಮಿನರಲ್ ಬಾಟಲ್ ಕೊಂಡುಕೊಂಡು, ಮನೆಗೆ ಬಂದೆ.

**

ಕಲ್ಪನೆ

# ಸರ್ಕಾರಿ ಕಛೇರಿಯಲ್ಲಿ 'ಬಿಗ್ ಬಾಸ್'

**- ಗಣೇಶ ಹೆಗ್ಗಡೆ**

**''ರೀ** ಪದ್ಮಮ್ಮ, ಒಂದು ವಾರದಿಂದ ನಾನೂ ನೋಡ್ತಿದ್ದೀನಿ. ನಿಮ್ಮೆಜಮಾನ್ರು ಕೆಲ್ಸಕ್ಕೇಂತ 11ಕ್ಕೆ ಮನೆ ಬಿಡ್ತಿದ್ದವರು, ಈಚೀಚೆಗೆ ತೀರಾ ಬೆಳಿಗ್ಗೆ 9ಕ್ಕೇ ಹೊರಟು ಹೋಗ್ತಿದಾರಲ್ರೀ?''

''ಹೌದ್ರಿ ಸೀತಮ್ಮ. ಇವರ ಆಫೀಸಿನ ವಾತಾವರಣವೇ ಬದಲಾಗಿಹೋಗಿದೆ. ಮೊನ್ನೆ ಅಧಿಕಾರ ವಹಿಸಿಕೊಂಡ ಹೊಸ ಮುಖ್ಯಮಂತ್ರಿಗಳು 'ಸರ್ಕಾರಿ ಆಡಳಿತ ಯಂತ್ರದ ಸರ್ಜರಿ' ನನ್ನ ಮೊದಲ ಆದ್ಯತೆ ಎಂದು ಘೋಷಿಸಿದ್ದಾಗಿಲಿಂದ ಇವರಿಗೆ ಫಜೀತಿಗಿಟ್ಟುಕೊಂಡಿದೆ. ಈ ಹಿಂದೆ ರೆಸ್ಟ್‌ಗೆ ಅಂತ ಕಛೇರಿಗೆ ಹೋಗ್ತಾ ಇದ್ದ ಇವರಿಗೆ ಈಗ ಕೆಲ್ಸದ ಒತ್ತಡ ವಿಪರೀತವಾಗಿ ಮನೆಗೆ ಬಂದರೆ ಸಾಕಪ್ಪಾ ಅಂತ ಅನ್ನಿಸ್ತಿದೆಯಂತೇರಿ.''

> **'ಸರ್ಕಾರಿ ಆಡಳಿತ ಯಂತ್ರದ ಸರ್ಜರಿ ನನ್ನ ಮೊದಲ ಆದ್ಯತೆ' ಎಂದು ಹೊಸ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಅದರ ಹಿನ್ನಲೆಯಲ್ಲಿ ಹೀಗೆ ಕನಸು ಕಾಣುವುದರಲ್ಲಿ ತಪ್ಪೇನಿಲ್ಲ ಅಲ್ಲವೆ?**

''ಹೌದೇ?''

''ಹ್ಞೂ ರೀ, ಹಿಂದೆ ರಜೆ ಹಾಕದೆ, ಮದುವೆ, ಮುಂಜಿ, ಚೌಲದ ಊಟ ಅಂತ ಕಛೇರಿ ಟೈಮಿನಲ್ಲೇ ಹಾಜರಾಗುತ್ತಿದ್ದವರು, ಈಗ ಕಛೇರೀಲಿ ಟಾಯ್ಲೆಟ್ಟಿಗೆ ಹೋಗುವುದಕ್ಕೂ ಪರ್ಮಿಷನ್ ತೆಗೊಬೇಕಂತೆ, ಎಲ್ಲದಕ್ಕೂ ಬಯೋಮೆಟ್ರಿಕ್ಸ್ ಅಟೆಂಡೆನ್ಸ್ ಕಂಪಲ್ಸರಿ ಅಂತೆ.''

''ಛೇ ಛೆ, ಎಂಥಹ ಕಲಿಕಾಲ ಬಂತ್ರೀ? ನಿಮ್ಮೆಜಮಾನರು ರಜವೇ ಹಾಕದೆ ನಿಮ್ಜೊತೆ ಶೃಂಗೇರಿ, ಹೊರನಾಡು, ಕುಕ್ಕೆ ಸುಬ್ರಮಣ್ಯ ಅಂತ ಹೋಗ್ತಿದ್ದುದು ನನ್ಗೆ ಈಗ್ಲೂ ಕಣ್ಣು ಕಟ್ಟಿದಂತಿದೆ. ಅಂದ ಹಾಗೆ ನೆನ್ನೆ ಬೆಳಿಗ್ಗೆ ನಿಮ್ಮೆಜಮಾನ್ರು ಅದ್ಯಾಕ್ರಿ ಅಷ್ಟು ಜೋರಾಗಿ ಕಿರುಚಿಕೊಳ್ತಿದ್ರು?''

''ಈ ಸರ್ತಿ ಚುನಾವಣೇಲಿ ಸರ್ಕಾರ ಬದಲಿ ಆದ್ರೆ ನಮ್ಮ ಬೀದಿ ಮೂಲೆ ಗಣಪನಿಗೆ 108 ತೆಂಗಿನಕಾಯಿ ಒಡೀತೀನಿ ಅಂತ ಹರಕೆ ಕಟ್ಟಿಕೊಂಡಿದ್ದೀನಿ ಅಂತ ನಿಮ್ಗೆ ಹೇಳಿದ್ನಲ್ರೀ. ನನ್ನ ಆಸೆ ಫಲಿಸಿ, ತೆಂಗಿನಕಾಯಿಗೆ ಇವರನ್ನು ದುಡ್ಡು ಕೇಳಿದಾಗ ಅದೆಲ್ಲಿತ್ತೋ ನರಸಿಂಹಾವತಾರ, 'ದುಡ್ಡು ಜಾಸ್ತೀನೆ ಕೊಡ್ತೀನಿ' ಇನ್ನು ನೂರು ಕಾಯಿ ಹೆಚ್ಚಿಗೆ ತೆಗೆದುಕೊಂಡು ಬಾ. ಎಲ್ಲಾ ಕಾಯಿಗಳನ್ನು ಆ ಗಣಪತಿಯ ಬದಲು, ನಿನ್ನ ತಲೇ ಮೇಲೆ ಒಡೆಯುತ್ತೇನೆ ಅಂತ ರೇಗಿದಾಗ ತುಂಬಾ ಭಯವಾಯ್ತೂರೀ.''

''ಅಯ್ಯೋ ರಾಮನೇ?''

''ಅಯ್ಯೋ ರಾಮ ಅನ್ನ ಬ್ಯಾಡಿ ಸೀತಮ್ಮ, ಅಯ್ಯಯ್ಯೋ ಸಿದ್ದರಾಮ! ಅನ್ನಿ.''

''ಯಾವುದಕ್ಕೂ ನೀವು ಹುಷಾರಾಗಿರಿ ಪದ್ಮಮ್ಮ, ನಮ್ಮನೇಲಿ ಇವರದ್ದು ಒಂದು ಸ್ಪೇರ್ ಹೆಲ್ಮೆಟ್ಟಿದೆ, ಯಾವುದಕ್ಕೂ ಕೊಟ್ಟಿರ್ತೀನಿ. ನಿಮ್ಮೆಜಮಾನ್ರು ಮನೆಯಲ್ಲಿರುವಾಗ ತಪ್ಪದೇ ಹಾಕೊಳ್ಳಿ.''

''ಥ್ಯಾಂಕ್ಸ್ ಸೀತಮ್ಮ. ನಿಮ್ಮದು ತುಂಬಾ ಅನುಭವಸ್ಥ ನೆರೆ.''

★ ★ ★ ★

''ರೀ ಪದ್ಮಮ್ಮ, ನಿಮ್ಮೆಜಮಾನ್ರು ಹುಷಾರಾಗಿದ್ದಾರೆ ತಾನೆ? ಮೊನ್ನೆ ರಾತ್ರಿ ಪೇಟೇ ಬೀದೀಲಿ ನಮ್ಮನೆಯವರಿಗೆ ಅವರು ಗುರುತೇ ಸಿಗಲಿಲ್ಲವಂತೆ.''

''ದಿಟಾರಿ, ಎರಡು ಕೆ.ಜಿ. ಡೌನಾಗಿ ಹೋಗಿದ್ದಾರೆ.''

''ಅಂದಹಾಗೆ, ಬೆಲ್ಟನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳುವ ಬದಲು ಜನಿವಾರದ ತರಹ ಹಾಕಿಕೊಂಡಿದ್ರು. ಯಾವುದಕ್ಕೂ ಒಂದ್ಸಾರಿ ವಿಚಾರಿಸು ಅಂತಂದ್ರು ಇವರು.''

''ಹಾಗೆ ಗಾಬರಿ ಪಡುವಂತಥಾದ್ದು ಏನು ಇಲ್ರೀ. ಇವರ ಕಛೇರಿಗೆ ಒಬ್ಬ ಹೊಸದಾಗಿ 'ಬಿಗ್ ಬಾಸ್' ಬಂದಿದ್ದಾನಂತೆ. ಬಂದ ದಿನದಿಂದಲೇ ಕಛೇರಿಯ ವಾತಾವರಣವನ್ನೇ ಬದಲಿಸಿಬಿಟ್ಟಿದ್ದಾನಂತೆ. ಹೊಸ ನಿಯಮದ ಪ್ರಕಾರ, ಕಛೇರಿಯ ಪ್ರತಿ ನೌಕರನೂ ಮೈಕ್ರೊಫೋನ್ ವ್ಯವಸ್ಥೆಯಿರುವ ಬೆಲ್ಟನ್ನು ಧರಿಸಿರಲೇಬೇಕು. ಮೊದಲೇ ಇವರದ್ದು ಜನಸಂಪರ್ಕವಿರುವ ಕಛೇರಿ. ಕಛೇರಿಯ ವೇಳಾ ಸಮಯದಲ್ಲಿ ಫೋನಿನ ಸ್ವಿಚ್ ಆನ್ ಮಾಡಿಕೊಂಡಿರುವುದು ಕಂಪಲ್ಸರಿ. ಗ್ರಾಹಕರ ಜತೆ ಅಥವಾ ಇತರೇ ಸಹೋದ್ಯೋಗಿಗಳ ಜತೆ ಇವರು, ಏನೇ ಮಾತನಾಡಿಕೊಂಡರೂ ಅದು ಬಿಗ್ ಬಾಸ್‌ನ ಕಿವಿಗೆ ತಲುಪುವ ನೇರ ವ್ಯವಸ್ಥೆ ಅಲ್ಲಿ ಕಲ್ಪಿಸಲಾಗಿದೆಯಂತೆ.''

''ಪದ್ಮಮ್ಮ, ನೀವು ಹೇಳ್ತಾ ಇರೋದು ಕೇಳಿದ್ರೆ 'ಬಿಗ್ ಬಾಸ್' ಟಿ.ವಿ. ಸೀರಿಯಲ್ ಜ್ಞಾಪಕಕ್ಕೆ ಬರ್ತಾ ಇದೆಯಲ್ರೀ.''

''ನೋಡಿದ್ರಾ, ಹಿಂದಿನಿಂದಲೂ ನಾನು ಹೇಳ್ತಾ ಇರ್ಲಿಲ್ವೇ ಸೀತಮ್ಮ, ಟಿ.ವಿ. ಸೀರಿಯಲ್‌ಗಳಿಗೂ ನೈಜ ಜೀವನಕ್ಕೂ ಸಾಮ್ಯವಿರುತ್ತೆ ಅಂತಾ. ಇನ್ನೊಂದು ಆಘಾತಕಾರಿ ವಿಷಯವೆಂದರೆ, ನೌಕರರ ಚಲನವಲನಗಳನ್ನು ಗಮನಿಸಲು, ಇಕ್ಕಟ್ಟಿನ ಸ್ಥಳಗಳಲ್ಲಿ ಸಿ.ಸಿ.ಟಿ.ವಿ., ಕ್ಯಾಮರಾಗಳನ್ನು ಅಳವಡಿಸಿದ್ದಾನಂತೆ, ಆ ಬಿಗ್ ಬಾಸು.''

''ಯಾರ್‍ರೀ ಅವ್ನು? ಬುದ್ಧಿ ಇಲ್ದೇ ಇರೋನು. ಹೀಗೆ ಹೆದರಿಸ್ತಾ ಕೂತರೆ ಸರ್ಕಾರೀ ಕೆಲಸಕ್ಕೆ ಇನ್ಮುಂದೆ ಯಾರ್‍ರೀ ಹೋಗ್ತಾರೇ? ಅಂದ ಹಾಗೆ, ನಿನ್ನೆ ರಾತ್ರೆ ನಿಮ್ಮೆಜಮಾನ್ರು ರಾತ್ರೆ ವರಾಂಡಾದಲ್ಲಿ ಲೈಟು ಆರಿಸಿ ಶಥ ಪಥ ತಿರುಗುತ್ತಿದ್ದರು. ಯಾಕೆ?''

''ತುಂಬಾ ಟೆನ್ಷನ್ನಿನಲ್ಲಿದ್ರೂರೀ ಇವರು. 'ಕನ್‌ಫೆಷನ್' ರೂಮಿಗೆ ಇವರನ್ನೂ ಕರೆಸಿಕೊಂಡ 'ಬಿಗ್ ಬಾಸ್' ಒಬ್ಬ ಗ್ರಾಹಕನಿಂದ ಒಂದು ಸಾವಿರ ಲಂಚ ತೆಗೆದುಕೊಂಡಿದ್ದು ನಮ್ಮ ಗಮನಕ್ಕೆ ಬಂದಿದೆ. ನಿಜವೇ? ಎಂದು ಇವರನ್ನು ಪ್ರಶ್ನಿಸಿದನಂತೆ. ತಬ್ಬಿಬ್ಬಾದ ಇವರು ವಿಧಿಯಿಲ್ಲದೇ ಕೊನೆಗೆ ಸತ್ಯವನ್ನು ಒಪ್ಪಿಕೊಂಡು ಗಡ ಗಡ ನಡುಗುತ್ತಾ ಕುಳಿತಿದ್ದಾಗ, ಅದೇ ಅಶರೀರವಾಣಿ 'ಭೇಷ್, ನಿನ್ನಂತಹ ನೌಕರರು 'ಬಿಗ್ ಬಾಸ್' ಕಛೇರಿಯಲ್ಲಿ ಇರುವುದು ತುಂಬಾ ಇಷ್ಟ. ಆದರೆ, ನನ್ನದೊಂದು ಷರತ್ತು. ಇನ್ನು ಮುಂದೆ ನಿನ್ನ ಪ್ರತಿ ಸಂಪಾದನೆಯ ಅರ್ಧ ಭಾಗವನ್ನು ನೀನು ನನಗೆ ತಪ್ಪದೇ ತಲುಪಿಸಬೇಕು. ಈ ಗುಟ್ಟಿನ ವಿಚಾರ ಈ ಕಛೇರಿಯ ಇತರೇ ಸದಸ್ಯರಿಗೆ ತಿಳಿಯುವಂತಿಲ್ಲ. ನೀನು ಎಲಿಮಿನೇಟ್, ಟ್ರಾನ್ಸ್‌ಫರ್ ಆಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು' ಎಂದಿತಂತೆ.''

''ಒಂದ್ನಿಮಿಷ ತಾಳಿ ಪದ್ಮಮ್ಮ, ನನಗೊಂದು ಡೌಟು. ಆ ಬಿಗ್ ಬಾಸ್ ಕಣ್ಣಿಗೇ ಕಾಣಿಸ್ಕೊಳಲ್ಲ. ಇನ್ನು ಪ್ರತಿದಿನ ಲಂಚದ ಹಣ ಹೇಗ್ರೀ ತಲುಪಿಸೋದಕ್ಕೆ ಸಾಧ್ಯ?''

''ನಮ್ಮೆಜಮಾನ್ರಿಗೂ ಇದೇ ಡೌಟು ಬಂದಿತ್ತಂತೇರಿ. ಆ 'ಕನ್‌ಫೆಷನ್' ರೂಮಿನ ಮೂಲೆಯೊಂದರ ಗೋಡೆಯಲ್ಲಿ ಪೋಸ್ಟ್ ಆಫೀಸು ಡಬ್ಬದ ಬಾಯಿಯ ತರಹ ಓಪನಿಂಗ್ ಇತ್ತಂತೆ. ಇವರು ಕೂಡಲೇ ಎದ್ದು ಆ ತೂತಿನಲ್ಲಿ ಹಣವನ್ನು ಡ್ರಾಪ್ ಮಾಡಿದರಂತೆ. ಆದರೆ ಆ ಗಡಿಬಿಡಿಯಲ್ಲಿ ತಮ್ಮ ಸ್ವಂತ 500 ರೂ. ನೋಟನ್ನು ಸೇರಿಸಿ ಹಾಕಿ ಬಿಟ್ಟಿದ್ದಾರಂತೆ.''

''ಇದು ತೀರಾ ಅನ್ಯಾಯ ಪದ್ಮಮ್ಮ. ಅವನ್ಯಾರೋ ಬಿಗ್ ಬಾಸಲ್ಲ, 'ಬ್ಯಾಗ್ ಬಾಸ್' ಇರ್ಬೇಕು. ಅಂದಹಾಗೆ, ಇಕ್ಕಟ್ಟಿನ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾ ಇಟ್ಟಿದ್ದ ವಿಚಾರ ತಿಳಿದೂ ತಿಳಿದೂ ನಿಮ್ಮೆಜಮಾನ್ರು ಹೀಗೆ ರೆಡ್ ಹ್ಯಾಂಡಾಗಿ ಸಿಕ್ಕಿಹಾಕಿಕೊಳ್ಳಬಾರದಿತ್ತು.''

''ಆ ಸಿ.ಸಿ.ಟಿ.ವಿ. ಕ್ಯಾಮರಾಗಳು ಗೋಡೆಗಳ ಮೇಲೆ ಮಾತ್ರಾ ಇದೇ ಅಂತ ಇಡೀ ಕಛೇರಿ ಜನ ಭಾವಿಸಿದ್ದರಂತೆ, ಆದ್ರೆ ಪ್ರತಿ ಟೇಬಲ್ ಕೆಳಗೂ ಅವು ಇದ್ದುದು ಇವರನ್ನು ಯಾಮಾರಿಸಿತಂತೆ.''

''ಅಯ್ಯೋ ಹೋಗ್ಲಿ ಬಿಡಿ ಪದ್ಮಮ್ಮ. ಆದದ್ದು ಆಗಿಹೋಯ್ತು. ವಿ.ಆರ್.ಎಸ್. ತೆಗೆದುಕೊಂಡು ಇನ್ಮೇಲೆ ಆರಾಮಾಗಿರೋಕ್ಕೆ ಹೇಳಿ ನಿಮ್ಮೆಜಮಾನರಿಗೆ.''

''ವಿ.ಆರ್.ಎಸ್. ಮನೆ ಹಾಳಾಯ್ತು, ಕೆ.ಆರ್.ಎಸ್.ನಲ್ಲಿ ನೀರಿನ ಮಟ್ಟ ಎಷ್ಟಿದೆ? ಅಂತ ಮೊನ್ನೆ ಯಾರೋ ಹಿತೈಷಿಗಳನ್ನು ವಿಚಾರಿಸುತ್ತಿದ್ರಂತೆ ಇವರು. ನನ್ಗೆ ಯಾಕೋ ತುಂಬಾ ಭಯವಾಗ್ತಿದೇರಿ.''

''ಧೈರ್ಯವಾಗಿರಿ ಪದ್ಮಮ್ಮ. ಹೀಗೆ ಧೃತಿಗೆಡಬೇಡಿ. 'ಕುಂಕುಮಭಾಗ್ಯ' ಯೋಜನೆಯಡಿಯಲ್ಲಿ ಖಂಡಿತ ಆ 'ಸಿದ್ರಾಮ' ನಿಮ್ಮನ್ನು ಕಾಪಾಡ್ತಾನೆ.''

**




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

**SIEMENS**
Authorised
Hearing Care
Centre

Avail **FREE** supply of batteries for a year
on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ರೈಲ್ವೇ ಬೋರ್ಡ್ ಕರಾಮತ್ತು

**- ಇ.ಆರ್. ರಾಮಚಂದ್ರನ್**

**ರೈ**ಲು ಪ್ರಯಾಣವೆಂದರೆ ಹೇಗೋ ಲಾಸ್ಟ್ ಮಿನಿಟ್ ಸ್ಟೇಷನ್ ಸೇರಿ, ಕರ್ಚೀಫ್ ಹಾಕಿರುವ ಜಾಗಕ್ಕೆ 20 ರೂಪಾಯಿ ತೆತ್ತು, ಗಾಡಿ ಯಾವಾಗ ಹೊರಡುವುದೋ ಎಂದು ಕಾಯುವುದು ಸಾಮಾನ್ಯ.

ಈಗೀಗ ರೈಲ್ವೇ ಬೋರ್ಡನಲ್ಲಿ ಸೀಟು ಹೊಡೆಯುವುದಕ್ಕೆ ಒಬ್ಬ ಐ.ಆರ್.ಎಸ್. ಅಧಿಕಾರಿ ರೈಲ್ವೇ ಮಂತ್ರಿಗಳ ನೆವ್ಯೂಗೆ 90 ಲಕ್ಷ ಲಂಚ ಕೊಟ್ಟಿರುವುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಬಾಕಿ 110 ಲಕ್ಷವನ್ನು ಮಂತ್ರಿಗಳ ಮನೆ ತುಂಬಾ ಕಿಕ್ಕಿರುವ ನೆವ್ಯೂಗಳಲ್ಲಿ ಯಾವ ನೆವ್ಯೂಗೆ ಕೊಟ್ಟ ಅಂತ ಹುಡುಕ್ತಾ ಇದಾರೆ. ಒಟ್ಟು 10 ಕೋಟಿ ಡೀಲಂತೆ.

ಹೀಗೇ ಆದರೆ ಮುಂದೇನು ಗತಿ. ಪ್ರಯಾಣ ಸುಖಕರವಾಗಿರಬೇಕೆಂದರೆ ನಾವೆಲ್ಲಾ ಏನು ಮಾಡಬೇಕು, ಏನು ಮಾಡಬೇಕಾಗುತ್ತೆ? ಸ್ವಲ್ಪ ನೋಡೋಣ ಬನ್ನಿ...

**ಇಲ್ಲಿ ರೈಲು ಬಿಟ್ಟಿದ್ದಾರೆ ಎಂದುಕೊಳ್ಳಬೇಡಿ, ನಾಳೆ ಇದು ನಿಜವಾಗಲೂಬಹುದು.**

★ ★ ★ ★

ಮೈಸೂರಿನಿಂದ ಬೆಂಗಳೂರಿಗೆ ಚಾಮುಂಡಿ ಎಕ್ಸಪ್ರೆಸ್ ಹೊರಡುವುದು ಬೆಳಿಗ್ಗೆ 6.45ಕ್ಕೆ. ಅದರಲ್ಲಿ ಕೆಲಸಕ್ಕೆ ಹೋಗುವವರೇ ಜಾಸ್ತಿ. ವಿಧಾನಸೌಧ ಬಾಬುಗಳು, ಸಿಟಿ ಮಾರ್ಕೆಟ್ನಿಂದ ಮೆಜಸ್ಟಿಕ್‌ವರೆಗೆ ಹರಡಿಕೊಂಡಿರುವ ಪೇಟೆಗಳಲ್ಲಿರುವ ಪೊಟ್ಟಣದ ಅಂಗಡಿಗಳ ಮಾಲೀಕರು, ಕೆಲಸವಿಲ್ಲದೆ ಊರು ಸುತ್ತುವ ಕಿಡಿಗೇಡಿಗಳು, ಪಿಕ್ ಪಾಕೆಟ್ಗಳು...

ನಾನು ಓಡಿ ಬಂದು ರಿಸರ್ವ್ ಸೀಟು ನೋಡಿ ಕೂತಾಗ ಎದುರಿಗೆ ಪೋರ್ಟರ್ ನನ್ನ ಮುಂದೆ ಕೆಂಪು ಬಟ್ಟೆ ಹರಡಿ ನಿಂತ. ಇದೇನು ಬೆಳ್ಳಂಬೆಳಿಗ್ಗೆ?

'ಏನೂ ಬೇಡಾಪ್ಪ' ಅಂದೆ.

'ಬೇಡ ಅಲ್ಲ, 100 ರೂಪಾಯಿ' ಅಂದ.

'ನನ್ನ ಸೀಟು ಮೊದಲೇ ರಿಸರ್ವ್ ಆಗಿದೆ.'

'ಸೀಟಿಗಲ್ಲಾ...... ಬ್ರೇಕಿಗೆ. ನೂರು ರೂಪಾಯಿಗೆ ಕೊಡಬೇಕು. ನೀವು ಹೇಳಿ' ಅಂತ ಪಕ್ಕದ ಸೀಟಿನವರಿಗೆ ಸನ್ನೆ ಮಾಡಿ ತೋರಿಸಿದ.

ಕೆಜಿ ಸ್ಕೂಲು ಸೇರಿಸುವುದಕ್ಕೆ ಟೇಬಲ್ ಕೆಳಗೆ ದುಡ್ಡು; ಆಪರೇಷನ್ಗೆ ಮುಂಚೆ ಓಟಿ ಟೆಬಲ್ ಕೆಳಗೆ ಲಂಚ; ಟ್ರೈನಿನಲ್ಲಿ ಬ್ರೇಕಿಗೆ? ಬರ್ತಾ ಬರ್ತಾ ನಮ್ಮ ದೇಶ ಎಲ್ಲಿಗೆ ಹೋಗ್ತಾ ಇದೆ?

ಪಕ್ಕದ ಸೀಟಿನ ಆಸಾಮಿ ನೋಡುವುದಕ್ಕೆ ಎಜುಕೇಟೆಡ್ ಹಾಗೆ ಕಾಣಿಸಿದ್ರು.

'ಲಕ್ನೋದಲ್ಲಿರುವ ರೈಲ್ವೆಯ ಆರ್.ಡಿ.ಎಸ್.ಒ. ರಿಸರ್ಚ್ ಸಂಸ್ಥೆಯವರು 'ಲಾಲು ಎಂಡ್ ಭಾಲು' ಕಂಪನಿಯವರಿಂದ ಹೊಸಾ ಬ್ರೇಕ್ ಹಾಕೀದಾರಂತೆ. ಬಜೆಟ್ ಪ್ರಕಾರ ನಾಳೆ ಏಪ್ರಿಲ್ ಫಸ್ಟ್‌ನಿಂದ ಎಲ್ ಎಂಡ್ ಬಿ ಬ್ರೇಕ್ ಹಾಕ್ಬೇಕಾಗಿತ್ತು. ರೈಲ್ವೇ ಮೆಂಬರ್ (ಬ್ರೇಕ್) ಅದನ್ನು ಇವತ್ತೇ ಹಾಕ್ಸೀದಾರಂತೆ. ಅದಕ್ಕೆ ಒಬ್ಬೊಬ್ಬರಿಂದಲೂ ನೂರು ರೂಪಾಯಿ ಇಸ್ಕೋತಾ ಇದಾರೆ. ಹಳೆ ಬ್ರೇಕ್ನಲ್ಲೇ ಓಡಿದ್ರೆ ಎಲ್ಲೋ ಡಿಕ್ಕಿ ಹೊಡ್ದು ಎಲ್ಲಿ ನಮ್ಮ ಮೂಳೆಗಳು ಪುಡಿಯಾಗುತ್ತೋ ಗೊತ್ತಿಲ್ಲ. ಗಟ್ಟಿಮುಟ್ಟಾಗಿ ಬೆಂಗಳೂರಿಗೆ ಸೇರಬೇಕೆಂದಿದ್ರೆ ನೂರು ಕೊಡೋದು ಒಳ್ಳೇದು. ಸುಮ್ಮನೆ ಯಾಕೆ ಕಿತಾಪತಿ!' ಅಂದ್ರು.

'ಲಾಲು ಎಂಡ್ ಭಾಲು ಕಂಪನಿ ಹೇಗೆ?'

'ನನಗೂ ಗೊತ್ತಿಲ್ಲ. ಟ್ರೈನಿನಲ್ಲಿ ಪ್ರತಿ ಸಾಮಾನೂ ಅವರೇ ಸಪ್ಲೈ ಮಾಡ್ತಾರೇಂತ ಎಲ್ಲೋ ಓದಿದ್ದು ನೆನಪು.'

ತಲೆಗೆ ನೂರು. ಬೋಗಿಗೆ ನೂರು ಜನ. ಇಪ್ಪತ್ತು ಬೋಗಿಗಳು. ಒಂದು ಟ್ರಿಪ್‌ಗೆ ಎಷ್ಟು ಬರುತ್ತೆ ಬ್ರೇಕ್ ಮೆಂಬರ್ಗೆ.. ನಾನು ಲೆಕ್ಕದಲ್ಲಿ ಕೊಂಚ ವೀಕು. ತಲೆ ಸುತ್ತುವುದಕ್ಕೆ ಶುರುವಾಯಿತು.

ನೂರು ಇಸ್ಕೊಂಡು ಹೋದ ಪೋರ್ಟರ್. ಗಾಡಿ ಹೊರಟಾಗ ಆರ್.ಡಿ.ಎಸ್.ಒ. ಡೈರೆಕ್ಟರ್ ಪ್ಲಾಟ್ಫಾರ್ಮನಲ್ಲಿ ನಿಂತು ನಮಗೆಲ್ಲಾ ನಗುತ್ತಾ ಬೈಬೈ ಮಾಡ್ತಿದ್ರು. ರುಮಾಲು ಹೊತ್ತು ದುಡ್ಡು ಕಲೆಕ್ಟ್ ಮಾಡಿದ ಪೋರ್ಟರ್ ಗುಂಪು ಅವರ ಸುತ್ತಾ ಕಿಸೀತಾ ನಿಂತಿತ್ತು!

ನಮ್ಮ ಗಾಡಿ ಮಂಡ್ಯ ಸೇರಿದಾಗ, ಸಣ್ಣ ನಿದ್ದೆ ಮಾಡಿದ್ದೆ. ಬೆಳಿಗ್ಗೆ ನಾಲ್ಕು ಘಂಟೆಗೆ ಎದ್ದು ರೆಡಿಯಾಗಿ ಬರಬೇಕೂಂದ್ರೆ ರಾತ್ರಿ ನಿದ್ದೆ ಖೋತಾನೆ! ಮಂಡ್ಯದಿಂದ ನಮ್ಮ ಗಾಡಿ ಹೊರಡುವ ಸೂಚನೆ ಕಾಣಲಿಲ್ಲ. ಒಂದಿಷ್ಟು ಆಫೀಸರ್ಸ್ ಗಾಡಿ ಹತ್ತಿದ್ರು. ಅವರ ಕತ್ತಿನಲ್ಲಿ ಅವರ ಐಡಿ ಕಾರ್ಡು ನೇತಾಡುತ್ತಿತ್ತು. ವೀಲ್ ಎಂಡ್ ಹೋಲ್.

ಅವರೊಲ್ಲೊಬ್ಬರು ಶುರು ಮಾಡಿದರು.

'ನಾವು ಎಲ್ಲೋಹಂಕದ 'ವೀಲ್ ಎಂಡ್ ಹೋಲ್' ಫ್ಯಾಕ್ಟರಿಯವರು. ನಮಗೆ ಈಗೀಗ ಮೆಂಬರ್ ಮೆಕ್ಯಾನಿಕಲ್ ಸಾಹೇಬ್ರಿಂದ ಮೆಸೇಜ್ ಬಂತು; ಅದಕ್ಕೇ ಓಡಿ ಬಂದ್ವಿ. ಎಸ್-3 ಕಂಪಾರ್ಟ್‌ಮೆಂಟಿನ ಟ್ರೈನಿನ ವೀಲ್ ಐದು ಸಾವಿರ ಘಂಟೆ ಓಡಿ ಓಡಿ ಸವೆದಿದೆ. ಅದನ್ನು ರೀಪ್ಲೇಸ್ ಮಾಡಿದ್ರೆ ಒಳ್ಳೇದು ಅಂತ ಬಂದಿದೆ ಮೆಸೇಜು. ಇಲ್ದಿದ್ರೆ ರಾಮನಗರ ಸೇರುವಷ್ಟರಲ್ಲಿ ಗುಂಡಗಿರುವ ವೀಲು ಹೋಲ್ ಆಗಿರುತ್ತೆ. ನಿಮ್ಮೆಲ್ಲರ ಅದೃಷ್ಟ ಚೆನ್ನಾಗಿಲ್ಲದಿದ್ದರೆ ಟ್ರೈನ್ ಅಲ್ಲಿ ಬ್ರಿಡ್ಜಿನಿಂದ ಬೀದೀಗೆ ಇಳಿಬಹುದು. ನಾವು ಈಗಲೇ ವೀಲ್ನ ಕಳಚಿ ಹೊಸ ವೀಲ್ ಹಾಕ್ತೀವಿ. ಒಬ್ಬೊಬ್ರೂ ಕೇವಲ ಐವತ್ತು ರೂಪಾಯಿ ಕೊಟ್ಟರೆ ಇನ್ನು ಹತ್ತು ನಿಮಿಷದಲ್ಲಿ ತಯಾರು ಮಾಡ್ತೀವಿ.' ಅಂತ ಹೇಳಿ ಜೂನಿಯರ್ ಆಫೀಸರಿಗೆ ಸನ್ನೆ ಮಾಡಿದರು. ಅವನು ಖಾಲಿ ಬ್ರೀಫ್ ಕೇಸ್ ತೆಗೆದ.

ನಾನು ನನ್ನ ನೈಬರ್ನ ನೋಡಿದೆ. ಅವ್ರೂ ವಿಧಿ ಇಲ್ಲ ಅನ್ನೋಹಾಗೆ ತಲೆ ಆಡಿಸಿದ್ರು.

ಐವತ್ತು ಇಂಟು ನೂರು ಇಂಟು ಇಪ್ಪತ್ತು... ಎಷ್ಟಾಗುತ್ತೇ ಅಂತ ಯೋಚಿಸ್ದೆ.

ಐದು ನಿಮಿಷದಲ್ಲಿ ಬ್ರೀಫ್ ಕೇಸು ತುಂಬಿತು. ಇನ್ನೈದು ನಿಮಿಷದಲ್ಲಿ ಗಾಡಿ ಹೊರಟಿತು.

ಮಂಡ್ಯ ಬಿಟ್ಟಾಗ ಪ್ಲಾಟಫಾರ್ಮನಲ್ಲಿ ಯೂನಿಫಾರ್ಮ ಹಾಕಿದ ಎಲ್ಲಾ ಆಫೀಸರುಗಳು ಕೈಲಿ ಬ್ರೀಫ್ ಕೇಸು ಹಿಡಿದು ಕಾಫಿ ಹೀರುತ್ತಾ ನಿಂತಿದ್ದರು. ಒಂದಿಬ್ಬರು ನಮ್ಮನ್ನು ಗುರ್ತು ಹಿಡಿದು ಟಾ ಟಾ ಮಾಡಿದ್ರು. ಅವರ ಹಿಂದೆ ಯಾರೋ ದೊಡ್ಡ ಆಫೀಸರು ನಿಂತಿದ್ದರು. 'ಅವರೇ ಮೆಂಬರ್ (ಮೆಕ್ಯಾನಿಕಲ್)' ಅಂದ್ರು ನನ್ನ ಪಕ್ಕದ ಎಜುಕೇಟೆಡ್ ಜನ್ಟಲ್ಮನ್.

ಮದ್ದೂರು ಬಂದಾಗ ನಾಷ್ಟ ಸ್ಟಾಪ್ ಅಂತ ಇಳಿದೆ. ಎರಡು ಮೂರು ಮದ್ದೂರು ವಡೆ ತಿಂದು ಕಾಫಿ ಬಾಯಿಗೆ ಬಿದ್ದರೆ ಈಗಲೂ ಹೋಗುವ ಪ್ರಾಣ ಸೇವ್ ಮಾಡ್ಕೋಬಹುದು.

ಅಷ್ಟರಲ್ಲಿ ಕೌಂಟರ್ನಲ್ಲಿ ಜಗಳ.

ಕೇಟರರ್ ಕೂಗ್ತಾ ಇದ್ದ.

'ನಮಕು ಎನೂ ಕೊತ್ತಿಲ್ಲ. ರೈಲ್ವೇ ಕೇಟರಿಂಗ್ ಇನಸ್ಟಿಟ್ಯೂಟ್ ಸಪ್ಲೈ ಮಾಡಿದ್ದು. ಇಲ್ಲಿ ಮತ್ತೂರು ವಡೆ ಪಾಮಾಯಿಲ್ದೆ ಸಿಗೋದು. ಆಫರ್ ಇದೆ. ಮೂರು ಡಜನ್ ತಕೋಬೇಕು. ಒರು ಡಜನ್ ಫ್ರೀ. ಗೇವಲ ಮುನ್ನೂರು ರೂಪಾಯಿ ಮಾತ್ರ. ಬೇಕ ತಕೊಳಿ. ಸ್ಟಾಕ್ ಇಲ್ಲೈ.'

ಯಾರೋ ಅದನ್ನು ತೊಗೊಂಡವ್ರು ರುಚಿ ನೋಡಿ ಅಲ್ಲೇ ಥೂ ಎಂದು ಉಗಿದು ಪೂರ್ತಿ ಪ್ಯಾಕೆಟ್ನ ಎಸೀತಾ ಇದ್ರು.

'ಯಾಕೆ ಸಾರ್' ಎಂದೆ.

'ಇದು ಮದ್ದೂರು ವಡೆ ಅಲ್ಲ. ಮತ್ತೂರು ಪಾಷಾಣ. ಇದನ್ನು ಯಾರು ಇಲ್ಲಿಗೆ ತರಿಸಿದ್ರೋ.'

ನನ್ನ ಪಕ್ಕದಲ್ಲಿ ನಿಂತಿದ್ದ ಎಜುಕೇಟೆಡ್ ಟೈಪ್ ಮತ್ತೆ ಬಾಯಿ ತೆಗೆದ್ರು 'ರೈಲ್ವೇ ಮೆಂಬರ್ – ಫುಡ್ ಅವರ ಪ್ಲಾನ್ ಇದು. ಅವರು ಕೇರಳದವ್ರು' ಅಂದ್ರು.

ವಡೆ ತೊಗೊಂಡವ್ರೆಲ್ಲಾ ಅಲ್ಲಲ್ಲೇ ಪ್ಯಾಕೆಟ್ ಸಮೇತ ಬಿಸಾಕ್ತಿದ್ರು.

ಹಾಗೂ ಹೀಗೂ ಬೆಂಗಳೂರು ಸೇರಿದ್ವಿ.

ಸಿನಿಯರ್ ಸಿಟಿಜನ್ಗೆ ರೈಲು ಟಿಕೆಟ್ ಬೆಲೆ 30 ರೂಪಾಯಿ. ನಾನು ಅದರ ಮೇಲೆ 150 ಕೊಟ್ಟಿದ್ದೆ. ಹಸಿವಿನಿಂದ ಹೊಟ್ಟೆ ಕಂಗಾಲಾಗಿತ್ತು. ಜೊತೆಗೆ ಇಷ್ಟು ದುಡ್ಡು ಬೋಳ್ಸಿದ್ರಲ್ಲಾಂತ ಉರೀತಾನೂ ಇತ್ತು.

ನನ್ನು ರಿಸೀವ್ ಮಾಡಲು ಬಂದಿದ್ದ ನನ್ನ ತಮ್ಮ..

'ಹೇಗಿತ್ತು ಪ್ರಯಾಣ. ಬಹಳ ಆರಾಮವಾಗಿದ್ದಿರಬೇಕು.'

'ಹೌದು. ಬಹಳ ಬಹಳ ಆರಾಮಾನೆ! ನಿನಗೆ ಹೇಗೆ ಗೊತ್ತೊ?'

'ನಿನ್ನ ನೈಬರ್ ಇಳಿದ್ರಲ್ಲಾ ಅವರೇ ರೈಲ್ವೇ ಬೋರ್ಡ್ – ಮೆಂಬರ್ ಸೆಕ್ರೆಟರಿ' ಅಂದ!

**

# ಮೂಷಕ ಮಹರ್ಷಿಯ ರಾಮಾಯಣ ದರ್ಶನಂ

**- ವೈ.ವಿ. ಗುಂಡೂರಾವ್**

**ನೀ**ವು ಟಿ.ವಿ.ಯಲ್ಲಿ ಮಿಕಿ ಮೌಸ್ ಕಾರ್ಟೂನ್ ನೋಡಿದೀರಲ್ಲವಾ?... ಒಂದು ಸಾರಿ ಏನಾಯಿತಂತೆ? ಒಂದು godownನಲ್ಲಿ ಈ ಮಿಕಿ ಇತ್ತಂತೆ. ಮಿಕ್ಕಿಲಿಗಳಿಗಿಂತ ಈ ಮಿಕಿ special. ಯಾವಾಗಲೂ ಧವಸ, ಧಾನ್ಯ ತಿಂದುಕೊಂಡು ಪುಟ ಪುಟನೆ ಓಡಾಡಿಕೊಂಡು ಇತ್ತು - ಹಾಯಾಗಿತ್ತೋ ಇಲ್ಲವೋ ಅದು ಇಲಿಗೇ ಗೊತ್ತು. ಅಂತೂ ಇತ್ತು. ಒಂದಿನ ಏನಾಯಿತು?! ಯಜಮಾನ ಬಂದ – Godown ಗೌಡ. ಮಿಕ್ಕಿಲಿಗಳನ್ನೆಲ್ಲಾ ಬಿಟ್ಟು ಈ ಮಿಕಿ ತಲೆ ಮೇಲೆ ಹೊಡೆದ. ಹೊಡೆದು ಕೇಳಿದ – ನಾಚಿಕೆ ಆಗಲ್ಲವಾ ನಿನಗೆ?

ನನಗ್ಯಾಕೆ ನಾಚಿಕೆ! ಇಡೀ godownನ್ನೇ ಮುಕ್ಕುತಾ ಇರೋ ನಿನಗೇ ಮತ್ತು ನಿನ್ನಂಥವರಿಗೇ ಇಲ್ಲದ ನಾಚಿಕೆ, after all ಇಲಿ ಆಗಿರುವ ನನಗ್ಯಾಕೆ?

ನಾನು ಮಾನವ, ಮಾನವ ಜನ್ಮ ದೊಡ್ಡದು. ಹಾಗಂತ ಹೇಳಿದಾರೆ ದಾಸರು. Ordinary ದಾಸರಲ್ಲ, ಪುರಂದರ ದಾಸರು. 'ದಾಸರೆಂದರೆ ಪುರಂದರ ದಾಸರಯ್ಯ' ಅಂದಿದ್ದಾರೆ ವ್ಯಾಸರು, ವ್ಯಾಸರಾಯರು.

**ಮಿಕಿಯ ಬಾಲ ಹಿಡಿದು ಗರ ಗರ ಗರ ಗರ ತಿರುಗಿಸಿ ಎದುರಿಗಿದ್ದ ಗೋಡೆಗೆ ಬೀಸಿ ಒಗೆದಾಗ ಏನಾಯಿತು?**

ಸರಿ. ನೀನು ದಾಸನೂ ಅಲ್ಲ ವ್ಯಾಸನೂ ಅಲ್ಲ. ಮೋಸ ಬರೀ ಮೋಸ. ಇರಲಿ. ನಾಚಿಕೆ ಆಗಲ್ಲವಾ ನಿನಗೆ ಅಂತ ಯಾಕೆ ಕೇಳಿದೆ ಅಂತ ಹೇಳಿ ನಂತರ ಇನ್ನೇನಾದರೂ ಇದ್ದರೆ ಹೇಳು.

ನೋಡು! ಇವತ್ತು ಮೋಸ ಮಾಡುವವನು ನಾಳೆ ಆಸೆ ಬಿಡಬಹುದು. ಇವತ್ತು ಲಘುವಾಗಿರುವವನು ನಾಳೆ 'ಗುರು'ವಾಗಬಹುದು. ಇವತ್ತು ಜೀವನದಲ್ಲಿ ಗುರಿ ಇಲ್ಲದವನು ನಾಳೆ 'ಹರಿ'ಯ ಹಿಂದೆ ಹೋಗಬಹುದು. ಈಗ ನನಗೆ ವಿವೇಕ ಬರ್ತಾ ಇದೆ. ಆ ದಾರೀಲಿ ನಡೀತಾ ಇದ್ದೀನಿ. ಈ ಪುಣ್ಯ, ಭಕ್ತಿ, ವಿರಕ್ತಿ, ಇದೆಲ್ಲಾ ನನಗೆ ಅರ್ಥವಾಗುತ್ತಾ ಇದೆ. ಆದರೆ ನಿನಗೆ ಅರ್ಥವಾಗುತ್ತಾ ಇಲ್ಲವಲ್ಲ ಅದಕ್ಕೆ ನಾಚಿಕೆ ಆಗಲ್ಲವಾ ಅಂತ ಕೇಳಿದೆ. ಹೀಗೆ ಕಾಳು ತಿಂದುಕೊಂಡೇ ಕಾಲ ಕಳೀತೀನಿ ಅನ್ನುವ ಹಾಗಿದ್ದರೆ ಹಾಗೇ ಇರು. ನಾನಂತೂ ಪುಣ್ಯ ಸಂಪಾದಿಸೋದಕ್ಕೆ ಹೋಗ್ತೀನಿ....

.....ಅಂತ ಹೋದ ಯಾವಾಗಲೂ ಹಣ ಸಂಪಾದಿಸೋದಕ್ಕೆ ಹೋಗುತ್ತಿದ್ದವನು ಇವತ್ತು ಪುಣ್ಯ ಸಂಪಾದಿಸೋದಕ್ಕೆ. ಇತ್ತ, ಮಿಕಿಗೆ ನಿದ್ದೆ ಬರಲಿಲ್ಲ, ಶಾಂತಿ ಸಿಗಲಿಲ್ಲ, ತಿಂದ ಕಾಳು ಜೀರ್ಣವಾಗಲಿಲ್ಲ, ಗೌಡ ಮತ್ತೆ ಗೋಡೌನ್‌ಗೆ ಹಿಂತಿರುಗಿ ಬರೋವರೆಗೂ ಕಾದಿತ್ತು.... ಬಂದ.... ಕೇಳಿತು.

ಈ ಪುಣ್ಯ ಅಂದೆಯಲ್ಲಾ ಅದು ಯಾವ ಮಂಡಿಲಿ ಸಿಗುತ್ತೆ?

ಅಯ್ಯೋ ಮುಂಡೇದೇ! ಅದು ಮಂಡೀಲಿ ಸಿಗೋದಲ್ಲವೋ. ಮಂಡೇಲಿ ತುಂಬಿಕೊಳ್ಳೋದು.

ಸರಿ. ಅದರಿಂದ ಏನು ಲಾಭ?.... ವ್ಯಾಪಾರಿಯ ಗೋಡೌನ್ನಲ್ಲಿ ಇದ್ದೂ ಇದ್ದೂ ಮಿಕಿಗೆ ಕೂಡ ಬರೀ 'ಲಾಭ'ದ ಮಾತೇ.

ನೋಡು! ಅದರಿಂದ ನಿನ್ನ ಪಾಪಗಳೆಲ್ಲಾ ಕಳೆಯುತ್ತೆ. ಮುಂದೆ ಪಾಪ ಮಾಡಲ್ಲ, ಆಗ ಇನ್ನೂ ಉತ್ತಮ ಜನ್ಮ ಬರುತ್ತೆ. ನೀನು ಮುಂದಿನ ಜನ್ಮದಲ್ಲಿ ಬೆಕ್ಕಾಗಿ ಹುಟ್ಟಬಹುದು. ಆಮೇಲೆ ನಿಯತ್ತಿನ ನಾಯಿ, ಉಪಕಾರಿ ದನ... ಹೀಗೆ.... ಕೊನೇಗೆ ಮನುಷ್ಯನಾಗಬಹುದು. ಆ ದೇವರ ಕೃಪೆ ಗಳಿಸಬಹುದು.

ಗೌಡ! Thank you. Thank you. ಪುಣ್ಯ ಹೇಗೆ ಸಂಪಾದಿಸೋದು. ಅದರ ಮಾರ್ಗ ತಿಳಿಸಿ ಪುಣ್ಯ ಕಟ್ಟಿಕೊ. ಏನು ಮಾಡಬೇಕು ಹೇಳು. ಹೇಗೆ ನಡಕೋಬೇಕು ತಿಳಿಸು. ಏನು ಮಾಡಬೇಕು, ಹೇಗೆ ನಡಕೋಬೇಕು ಅಂತ ತಿಳಿಸಿಕೊಟ್ಟರೂ ಪುಣ್ಯ ಬರುತ್ತೆ, ಅಲ್ಲವಾ?

ಓಹೋ! ಪರವಾಗಿಲ್ಲ. ಹುಷಾರಾಗಿಬಿಟ್ಟಿದ್ದೀಯ. ಕೇಳು... ಒಳ್ಳೊಳ್ಳೆ ವಿಚಾರಗಳನ್ನ ಚಿಂತಿಸ್ತಾ ಇರಬೇಕು. ಒಳ್ಳೊಳ್ಳೆ ಮಾತುಗಳನ್ನ ಆಡ್ತಾ ಇರಬೇಕು. ಒಳ್ಳೊಳ್ಳೆ ಕೆಲಸಗಳನ್ನ ಮಾಡ್ತಾ ಇರಬೇಕು, ಒಳ್ಳೊಳ್ಳೆ ಉಪನ್ಯಾಸಗಳನ್ನ ಕೇಳುತ್ತಾ ಇರಬೇಕು.

ಕೊನೆ ಮಾತು ಮಿಕಿಗೆ ಬಹಳ ಹಿಡಿಸಿತು – ಒಳ್ಳೊಳ್ಳೆ ಉಪನ್ಯಾಸಗಳನ್ನ ಕೇಳುತ್ತಾ ಇರಬೇಕು. ಸರಿ, ಒಳ್ಳೆ ಉಪನ್ಯಾಸ ಕೇಳೋದಕ್ಕೆ ಹೋಗ್ತೀನಿ, ಎಲ್ಲಿದೆ ಹೇಳು.

ಇಲ್ಲೇ ಸೀದ ಹೋಗಿ, ಬಲಕ್ಕೆ ತಿರುಗಿಕೋ. ನಂತರ ಎಡಕ್ಕೆ ಹೊರಳು. ಅಲ್ಲಿಂದ ಮತ್ತೆ ಸೀದ ಹೋಗು. ಸರ್ಕಲ್ ದಾಟು. ಅಲ್ಲೊಂದು ರಾಮ ಮಂದಿರ ಇದೆ. ಅಲ್ಲಿ ಇವತ್ತು ಒಬ್ಬ ದೊಡ್ಡ ವಿದ್ವಾಂಸರಿಂದ ರಾಮಾಯಣ ಕಥೆ ಇದೆ. ಕೇಳು ಗಮನವಿಟ್ಟು, ಪುಣ್ಯ ಬಂದರೂ ಬರಬಹುದು.

ಓಡಿತು ಮಿಕಿ, ರಾಮಮಂದಿರಕ್ಕೆ. ಹುಡುಕೋದು ಕಷ್ಟ ಆಗಲಿಲ್ಲ, ಇದು ರಾಮ ಮಂದಿರಾ.... ಆನಂದ ಸಾಗರಾ... ಅಂತ ಹಾಡು ಬರ್‍ತಾ ಇತ್ತು. ಒಳಗೆ ಕಾಲಿಟ್ಟಿತು ಇಲಿ. ಕಿಕ್ಕಿರಿದ ಜನ ಸಂದಣಿ. ಎಲ್ಲ ರೀತಿ ಜನರೂ ಭಯ ಭಕ್ತಿಗಳಿಂದ ಕೂತು ಭಜನೆ ಮಾಡುತ್ತಾ ಇದ್ದರು. ಬರೀ ರಾಮ ನಾಮ ಅಲ್ಲದೆ, ಕೃಷ್ಣ, ಶಿವ, ಮಾರುತಿ – ಎಲ್ಲಾ... ಯಾವ ದೇವರಿಂದ ಆದರೂ ಸರಿ. ಪುಣ್ಯ ಬರಲಿ ಅಂತಾನೋ ಏನೋ!

ಜಾಗ ಮಾಡಿಕೊಂಡು ಉಪನ್ಯಾಸಕರ ಮುಂದೆ ಹೋಗಿ ಕೂತಿತ್ತು. ಮೀಸೆ ನೆಟ್ಟಗೆ ಮಾಡಿಕೊಂಡು, ಬಾಲ ಮುದುರಿಕೊಂಡು, ಮೂತಿ ಉದ್ದ ಮಾಡಿಕೊಂಡು... ಉಪನ್ಯಾಸ ಶುರು. ಅದ್ಭುತ. ಇಡೀ ರಾಮಾಯಣ ಪಾರಾಯಣ. ಪುತ್ರ ಕಾಮೇಷ್ಠಿ ಯಾಗ.... ದಶರಥನ ಪತ್ನಿಯರು ಪಾಯಸ ಕುಡಿದದ್ದು... ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಹುಟ್ಟಿದ್ದು... ವಿಶ್ವಾಮಿತ್ರರು ಬಂದದ್ದು... ಸೀತಾ ಸ್ವಯಂವರ... ಪಟ್ಟಾಭಿಷೇಕ ಆದದ್ದು... ರಾಮನ

ವನವಾಸ.... ಸೀತಾಪಹರಣ.... ಮಾರುತಿ ಭೇಟಿ.... ರಾಮ ರಾವಣರ ಯುದ್ಧ.. ವಾಪಸ್ ಅಯೋಧ್ಯಾಗಮನ..... ಶ್ರೀರಾಮ ಪಟ್ಟಾಭಿಷೇಕ....

ಜನರೆಲ್ಲರೂ ತೀರ್ಥ ಪ್ರಸಾದಕ್ಕೆ ಕ್ಯೂ ನಿಂತರು. ಉಪನ್ಯಾಸಕರು ಎದ್ದರು. ನಮ್ಮ ಈ ಮಿಕಿ ಇತ್ತಲ್ಲ! ಅದು ಕಣ್ಣಲ್ಲಿ ನೀರು ತಂದುಕೊಂಡು ಪಂಡಿತರ ಕಾಲಿಗೆ ಬಿತ್ತು. 'ಗುರುಗಳೇ! ಧನ್ಯನಾದೆ. ನಮ್ಮ Godown ಗೌಡ ಹೇಳಿದ್ದು ನಿಜ. ಒಳ್ಳೊಳ್ಳೆ ಉಪನ್ಯಾಸಗಳನ್ನ ಕೇಳುತ್ತಾ ಇರಬೇಕು. ಆಗ ಪುಣ್ಯ ಬರುತ್ತೆ ಅಂತ. ನನ್ನ ಮೊದಲನೇ ಉಪನ್ಯಾಸದಿಂದಲೇ ನನಗೆ ಪುಣ್ಯ ಬಂದ ಅನುಭವ ಆಗುತ್ತಾ ಇದೆ. ನೀವು ವಿವರಸಿದ ಒಂದೊಂದು ಘಟನೆಯೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಕೂತುಬಿಟ್ಟಿದೆ. ಪುಣ್ಯ ಅನ್ನೋದು ಅದು ಮಂಡೀಲಿ ಸಿಗೋದಲ್ಲವೋ. ಮಂಡೇಲಿ ತುಂಬಿಕೊಳ್ಳೋದು ಅಂತ ಗೌಡ ಹೇಳಿದ್ದು ನಿಜ ಅನ್ನಿಸುತ್ತಾ ಇದೆ. ನನಗೆ ಇನ್ನು ಇಲಿ ಜನ್ಮದಿಂದ ಮುಕ್ತಿ ಅಂತ ಅನ್ನಿಸುತ್ತಾ ಇದೆ. ಮುಂದಿನ ಜನ್ಮದಲ್ಲಿ ನಾನು ಬೆಕ್ಕಾಗಿ ಹುಟ್ಟಬಹುದು. ಆಮೇಲೆ ನಿಯತ್ತಿನ ನಾಯಿ, ಉಪಕಾರಿ ದನ... ಹೀಗೆ. ಕೊನೇಗೆ ಮನುಷ್ಯನಾಗಬಹುದು. ಆ ದೇವರ ಕೃಪೆ ಗಳಿಸಬಹುದು.....

.... ಪಂಡಿತರಿಗೆ ಆಶ್ಚರ್ಯ! ಇದಕ್ಕೆ ನನ್ನ ಉಪನ್ಯಾಸ ಅರ್ಥ ಆಯಿತಾ ಅಂತ ಅನುಮಾನ. ಎಷ್ಟೋ ಜನ ವಿದ್ವಾಂಸರಿಗೇ ನನ್ನ ಮಾತು ಕಬ್ಬಿಣದ ಕಡಲೆ ಅಂತೆ. ವಿಷಯಗಳು ಗಹನ ಅಂತೆ. ಹೀಗಿರುವಾಗ ಒಂದು ಇಲಿ, after all a mouse, Micky mouse, rat, ಮೂಷಕ ನನ್ನ ಕಾಲಿಗೆ ಎರಗುತ್ತಾ ಇದೆಯಲ್ಲಾ ಅಂತ ಯೋಚಿಸಿ – ಎಲೈ ಇಲಿಯೇ! ನಿಜವಾಗಲೂ ನನ್ನ ಉಪನ್ಯಾಸ ನಿನಗೆ ಅರ್ಥವಾಯಿತಾ?

ಏನು ಗುರುಗಳೇ? ಹಾಸ್ಯ ಮಾಡುತ್ತಾ ಇದ್ದೀರಾ? ಬೇಕಾದರೆ ಪರೀಕ್ಷೆ ಮಾಡಿ.

ಸರಿ. ನಿನ್ನನ್ನ ಕೆಲವಾರು ಪ್ರಶ್ನೆಗಳು ಕೇಳ್ತೀನಿ ಹೇಳ್ತೀಯಾ?

ಓಹೋ.

ಮೊದಲನೆ ಪ್ರಶ್ನೆ. ದಶರಥನಿಗೆ ಎಷ್ಟು ಜನ ಮಕ್ಕಳು?

.... ಮಿಕಿ ಕಕ್ಕಾಬಿಕ್ಕಿ. ತಲೆ ಕೆರೆದುಕೊಂಡಿತು. ಪಿಳಿ ಪಿಳಿ ಕಣ್ಣು ಬಿಟ್ಟಿತು.... ಕ್ಷಮಿಸಿ ಗುರುಗಳೇ. ಇದೇ ಮೊದಲನೇ ಸಾರಿ ರಾಮಾಯಣ ಕೇಳ್ತಾ ಇರೋದು. ಇಷ್ಟು ಕಷ್ಟವಾದ ಪ್ರಶ್ನೆ ಕೇಳಿದರೆ ಕಷ್ಟ ಉತ್ತರ ಹೇಳೋದು... ಸಿಂಪಲ್ ಪ್ರಶ್ನೆ ಕೇಳಿ ದಯವಿಟ್ಟು.

ಪಂಡಿತರಿಗೆ ಸ್ವಲ್ಪ ಸಿಟ್ಟು... ನಿಯಂತ್ರಿಸಿಕೊಂಡು ಕೇಳಿದರು ಎರಡನೇ ಪ್ರಶ್ನೆ. ದಶರಥನ ಮಕ್ಕಳಲ್ಲಿ ಮೊದಲನೇ ಮಗನ ಹೆಸರೇನು?

ಮತ್ತೆ ಕಕ್ಕಾಬಿಕ್ಕಿ ಮಿಕಿ.... ತಲೆ ಕೆರೆತ.. ಪಿಳಿ ಪಿಳಿ ಕಣ್ಣು... ದಶರಥನ ಮಕ್ಕಳಲ್ಲಿ ಮೊದಲನೇ ಮಗನ ಹೆಸರಾ?.... ಎಷ್ಟು ಜನ ಮಕ್ಕಳು ಗುರುಗಳೆ ಅವನಿಗೆ?

ಸಿಟ್ಟು ಹೆಚ್ಚಿತು ಪಂಡಿತರಿಗೆ... ಏಯ್! ತಾಳ್ಮೆ ಪರೀಕ್ಷೆ ಮಾಡಬೇಡ. ಈಗ ಹೇಳು. ಸೀತೆ ಯಾರು? ರಾಮನಿಗೂ ಸೀತೆಗೂ ಏನು ಸಂಬಂಧ?

ಕಕ್ಕಾಬಿಕ್ಕಿ.. ತಲೆ ಕೆರೆತ.. ಪಿಳಿ ಪಿಳಿ ಕಣ್ಣು continued. ಯೋಚಿಸಿತು.... ರಾಮನಿಗೂ.... ಸೀತೆಗೂ.... ಏನು ಸಂಬಂಧ? .... ಹಾಂ! ಹೊಳೀತು.... ಸೀತೆ ರಾಮನ sister ಗುರುಗಳೇ....

ಪಂಡಿತರ ಸಿಟ್ಟು almost climaxಗೆ ಬಂತು. ಹಲ್ಲು ಕಚ್ಚಿಕೊಂಡು ಕೇಳಿದರು – ಆಂಜನೇಯನ ಹೆಸರು ಕೇಳಿದೀಯಾ?

ಆಂಜನೇಯ!.... ಆಂಜನೇಯ!.... ಆ ಪಾತ್ರ ರಾಮಾಯಣದಲ್ಲೇ ಬರುತ್ತಾ ಗುರುಗಳೇ?...

ಯಾವಾಗ ಇಲಿ ಈ ಮಟ್ಟದಲ್ಲಿ ಮಾತಾಡಿತೋ ಪಂಡಿತರ ಸಿಟ್ಟು ತಾರಕಕ್ಕೆ ಏರಿ ಅದುವರೆಗೂ ಹಿಡಿತದಲ್ಲಿದ್ದ ಸಿಟ್ಟು ಕಟ್ಟೆ ಒಡೆದು ಕೈಗೆ ಹರಿದು ಮಿಕಿಯ ಬಾಲ ಹಿಡಿದು ಗರ ಗರ ಗರ ಗರ ತಿರುಗಿಸಿ ಎದುರಿಗಿದ್ದ ಗೋಡೆಗೆ ಬೀಸಿ ಒಗೆದರು. ಮಿಕಿಯ — ಜ್ಞಾನ ತಪ್ಪಿತು... ಕೋಮ. ಪ್ರಸಾದಕ್ಕೆ ಕ್ಯೂ ನಿಂತಿದ್ದವರೆಲ್ಲ ಮಿಕಿನ ಸುತ್ತುವರೆದರು. ಅಯ್ಯೋ! ಇದೇನಾಯಿತು? ಪಾಪ ಇಲಿ ಸತ್ತು ಹೋಯಿತೋ ಏನೋ!... ಪಂಡಿತರು ಯಾಕೆ ಇಂಥ ಕೆಲಸ ಮಾಡಿದರು? ಒಂದು ಇಲಿಯಿಂದ ರಾಮಾಯಣ ನಿರೀಕ್ಷೆ ಮಾಡಕ್ಕಾಗತ್ತಾ?... ಛೇ... ಛೆ... ಛೆ... ಅಂತೆಲ್ಲಾ ಪೇಚಾಟ... ಪಂಡಿತರೂ ಬುಸುಗುಡುತ್ತಾ ಬೇಜಾರು, ಪಶ್ಚಾತ್ತಾಪ ಮುಂತಾದ ಗೊಂದಲದ ಭಾವನೆಗಳಿಂದ ಏನೂ ಮಾಡಲು ತೋಚದೆ ನಿಂತರು.

1, 2, 3, 4, 5, 6, 7, 8, 9, 10 ಸೆಕೆಂಡುಗಳು ಆಯಿತು ನೋಡಿ! ಎಲ್ಲಾ ಶಕ್ತಿಯನ್ನೂ ಮೈಗೂಡಿಸಿಕೊಂಡು ಮಿಕಿಯು ಎದ್ದು ನಿಂತಿತು – ಮೀಸೆ ನೆಟ್ಟಗೆ ಮಾಡಿಕೊಂಡು, ಬಾಲ ಸೆಟೆಸಿಕೊಂಡು, ಮೂತಿ ಉದ್ದ ಮಾಡಿಕೊಂಡು. ಎಲ್ಲರೂ ನೋಡು ನೋಡುತ್ತಿರುವ ಹಾಗೇ ಶ್ಲೋಕಗಳು, ರಾಮಾಯಣದ ಶ್ಲೋಕಗಳನ್ನು ಪುಂಖಾನುಪುಂಖವಾಗಿ narrate ಮಾಡೋದಕ್ಕೆ ಶುರು ಮಾಡಿತು. recite ಮಾಡೋದಕ್ಕೆ ಶುರು ಮಾಡಿತು, quote ಮಾಡೋದಕ್ಕೆ ಶುರು ಮಾಡಿತು.. ರಾತ್ರಿಯೆಲ್ಲಾ ಪಂಡಿತರು ಏನೇನು ಹೇಳಿದ್ದರೋ ಅದನ್ನ ರಿಪೀಟ್ ಮಾಡೋದಲ್ಲದೆ ಅದರೊಳಗಡೆಗಿರುವ ಗೂಢಾರ್ಥಗಳನ್ನೂ, ಸಂಕೇತಾರ್ಥಗಳನ್ನೂ explain ಮಾಡೋದಕ್ಕೆ ಶುರು. ನೆರೆದಿದ್ದವರೆಲ್ಲರೂ ತಮ್ಮ ತಮ್ಮ ಬೆರಳುಗಳನ್ನು ಏನು ಮಾಡಬೇಕು ಅಂತ ತೋಚದೆ, ಮೂಗಿನ ಮೇಲೆ ಇಟ್ಟುಕೊಂಡರು. ಈ ಪಂಡಿತರಿದ್ದರಲ್ಲ ಅವರು ಕಣ್ಣಲ್ಲಿ ನೀರನ್ನು ತಂದುಕೊಂಡು ಗದ್ಗದ ಕಂಠದಿಂದ ಮಿಕಿಯನ್ನು ಉದ್ದೇಶಿಸಿ ಇಂತೆಂದರು – ಕ್ಷಮಿಸಿ ಮಹಾಸ್ವಾಮಿ! ನೀವು ಇಲಿ ಅಲ್ಲ, ಇಲಿ ರೂಪದ ಮಹರ್ಷಿ – ಮೂಷಕ ಮಹರ್ಷಿ. ಯಾವುದೋ ಜನ್ಮದ ಪಾಪದಿಂದ ಮಿಕಿಯಾಗಿ ಹುಟ್ಟಿರಬಹುದು. ನಿಮ್ಮನ್ನು ತಪ್ಪು ತಿಳಿದುಕೊಂಡೆ. ನಿಮ್ಮನ್ನು ಪರೀಕ್ಷೆ ಮಾಡಿದ ಈ ಪಾಪಿಯನ್ನು ಕ್ಷಮಿಸಿ. ಇಂದಿನಿಂದ ನೀವೇ ನನ್ನ ಗುರು, ನಾನೇ ನಿಮ್ಮ ಶಿಷ್ಯ... ಅಂತ ಕಾಲಿಗೆ ಎರಗಿದರು.

... ಈಗ ನನ್ನ ಪ್ರಶ್ನೆ ನಿಮಗೆ. ಎರಡು ನಿಮಿಷದ ಹಿಂದೆ ದಶರಥನಿಗೆ ಎಷ್ಟು ಜನ ಮಕ್ಕಳು ಅಂತ ಗೊತ್ತಿರದ ಮಿಕಿ.., ದಶರಥನ ಮಕ್ಕಳಲ್ಲಿ ಮೊದಲನೆ ಮಗನ ಹೆಸರೇ ತಿಳಿದಿರದ ಮಿಕಿ..,

ಸೀತೆಯನ್ನ sister ಅಂದಿದ್ದ ಮಿಕಿ.., ಆಂಜನೇಯನ ಹೆಸರೇ ಕೇಳಿರದ ಮಿಕಿಯ..., ಬಾಲ ಹಿಡಿದು ಗರ ಗರ ಗರ ಗರ ತಿರುಗಿಸಿ ಎದುರಿಗಿದ್ದ ಗೋಡೆಗೆ ಬೀಸಿ ಒಗೆದ ನಂತರ, ಏಕೆ ಜ್ಞಾನೋದಯವಾಯಿತು? ಹೇಗೆ ಜ್ಞಾನೋದಯವಾಯಿತು?....

... ಗುಟ್ಟೇನು ಗೊತ್ತಾ? When it dashed against the Wall, Micky became WallMicky (ವಾಲ್ಮೀಕಿ)......

ನಾವೆಲ್ಲಾ ಒಂದು ರೀತಿ ಮಿಕಿ ಅಂತೆ ಒಂದು ಇಲಿ. ಸಣ್ಣಿಲಿ, ದೊಡ್ಡಿಲಿ, ಅಪ್ಪಿಲಿ, ಅಮ್ಮಿಲಿ, ತಮ್ಮಿಲಿ, ಅಕ್ಕಿಲಿ, ಆ ಇಲಿ, ಈ ಇಲಿ ಅಂತ ಈ famಇಲಿಯಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡುತ್ತಾ ಇರ್ತೀವಿ. ನಮ್ಮೊಳಗಿರುವ ವಾಲ್ಮೀಕಿಯ ಅರಿವೇ ಇರಲ್ಲ. ಯಾವಾಗ ಜೀವನದಲ್ಲಿ ಕಷ್ಟ, ನಷ್ಟ ನೋವು, ಸಂಕಟ, ದುಃಖ, ದುಮ್ಮಾನ ಇವೆಲ್ಲಾ ಬಂದು ನಮ್ಮನ್ನು ಗೋಡೆಗೆ ಹೊಡೆಯುತ್ತವೋ, ನಮ್ಮ ಹೃದಯ, ಮನಸ್ಸುಗಳನ್ನು ಗಟ್ಟಿ ಮಾಡುತ್ತವೋ... ಆ..ಗ ಪಾಠ ಕಲಿತು ನಮ್ಮೊಳಗಿರುವ ವಾಲ್ಮೀಕಿಯು ಜಾಗೃತನಾಗುತ್ತಾನೆ. ಆ...ಗ ಬದುಕಿನ ರಾಮಾಯಣದ ಸತ್ಯ, ಅರ್ಥ ತಿಳಿದು ಬಾಳು ಹಸನಾಗುತ್ತೆ.

ಹಾಗಾಗಲಿ ಎಂದು ನಮ್ಮೊಳಗಿರುವ ವಾಲ್ಮೀಕಿಯನ್ನ ಮತ್ತು ಅವನೊಳಗಿರುವ ಶ್ರೀರಾಮನನ್ನ ಪ್ರಾರ್ಥಿಸೋಣ, ಬನ್ನಿ.

✻✻




ಮೊದ್ಲು ಬರೀ ಪೋಸ್ಟ್‌ಕಾರ್ಡಲ್ಲೇ ನನ್ನ ಗುರ್ತು ಹಿಡೀತಿದ್ರು...

# ''ಚಂದ್ರಮತಿ''

**- ನಂದಿನಿ ಕಾಪಡಿ**

**ಪ್ರ**ತಿ ದಿನದಂತೆ ಬಿಲ್ಡಿಂಗ್‌ನ ಕಾಂಪೌಂಡ್‌ನಲ್ಲಿ ನಡೆಯುವ ಬದಲು ಇಂದು ಯಜಮಾನರ ಜತೆ ಗಾರ್ಡನ್‌ಗೆ ಹೋಗಿ ನಡೆಯುವಾ ಎಂದುಕೊಂಡು ನಾಲ್ಕಾರು ರೌಂಡು ಹೊಡೆದು, ಕಾಲು ನೋವು ಎನ್ನುತ್ತಾ ಅಲ್ಲೇ ಬೆಂಚಿನ ಮೇಲೆ ಕುಳಿತೆ. ಯಜಮಾನರು ಸಂತೋಷದಿಂದಲೇ ಮುಂದೆ ನಡೆಯುತ್ತಾ ಹೋದರು. ಪಕ್ಕದ ಬೆಂಚುಗಳ ಮೇಲೆ ಕುಳಿತಿದ್ದವರ ಕಡೆ ನನ್ನ ಗಮನ ಹರಿಯಿತು. ವೃದ್ಧರೊಬ್ಬರು ಬಾಬಾ ರಾಮದೇವ್ ಟಿವಿಯಲ್ಲಿ ತೋರಿಸುವ ಪ್ರಾಣಾಯಾಮ ಮಾಡುತ್ತಿದ್ದರು. ಇನ್ನೊಂದು ಕಡೆ ನಾಲ್ಕು ಪುರುಷರು ತುಂಬಾ ಆವೇಶದಿಂದ ಸುಪ್ರೀಂ ಕೋರ್ಟ್ ಹಿಂದಿನ ದಿನ ಜಾರಿಗೊಳಿಸಿದ ಆತಂಕವಾದಿಗಳ ಬಗ್ಗೆ ಕೊಟ್ಟ ತೀರ್ಪಿನ ಬಗ್ಗೆ ಚರ್ಚಿಸುತ್ತಿದ್ದರು. ಒಬ್ಬ ದಢೂತಿ ಮಹಿಳೆ ರಭಸದಿಂದ ಕಸರತ್ತು ಮಾಡುತ್ತಿದ್ದರು. ಇಬ್ಬರು ಮಹಿಳೆಯರು ತಮ್ಮ ತಮ್ಮ ಸೊಸೆಯರ ಬಗ್ಗೆ ಶಂಖ ಊದುತ್ತಿದ್ದರು. ಇನ್ನೊಂದು ಕಡೆ ತರುಣಿ ತಾಯಿಯರು ತಮ್ಮ ಮಕ್ಕಳ ಬೆಳವಣಿಗೆ ಬಗ್ಗೆ ಕಳಕಳಿಯಿಂದ ಚರ್ಚೆ ಮಾಡುತ್ತಿದ್ದರು. ಟ್ರ್ಯಾಕ್ ಮೇಲೆ ಅತಿ ಉತ್ಸಾಹಿ ತರುಣ ತರುಣಿಯರು ತಮ್ಮ ತಮ್ಮ ಹೊಸ ಜಾಗಿಂಗ್ ಸೂಟ್‌ಗಳು ಮತ್ತು ಶೂಸ್‌ಗಳನ್ನೂ ಪ್ರದರ್ಶಿಸುತ್ತಿದ್ದರು. ಬ್ರಾಂಡ್‌ಗಳ ಪೈಪೋಟಿ ಇಲ್ಲೂ ಕಾಣಬರುತ್ತಿತ್ತು. ಆದರೆ ನನ್ನ ಸೊಟ್ಟ ಗಮನ ತಿರುಗಿದ್ದು ಎರಡು ಬೆಂಚುಗಳ ಕಡೆ. ಸುಮಾರು 60-70 ವಯಸ್ಸಿನ ಪುರುಷರು. ವೃದ್ಧಾಪ್ಯ ಬಂದರೂ ಇನ್ನೂ ತಾವು ತರುಣರು ಎಂದು ತೋರಿಸುವ ಚಪಲ! ಆದರೆ ಅವರ ಮಾತುಗಳ ಪ್ರಕಾರ ಎಲ್ಲರೂ ತುಂಬಾ ಓದಿ ದೊಡ್ಡ ಕೆಲಸಗಳಲ್ಲಿದ್ದು ಕೆಲಸದಿಂದ ನಿವೃತ್ತಿ ಹೊಂದಿ ಈಗ ಸಮಾಜದ, ಪ್ರಪಂಚದ ಆಗು ಹೋಗುಗಳ ಮೇಲೆ ವಿಪರೀತ ಬುದ್ಧಿಯಿಂದ ಚರ್ಚಿಸುವ ಹಂತಕ್ಕೆ ಬಂದಿದ್ದರು ಎನಿಸುತ್ತಿತ್ತು. ತುಂಬಾ ಜೋರಾಗಿ ಮಾತಾಡುತ್ತಿದ್ದರಿಂದ ನನ್ನ ಕಿವಿಗಳ ಮೇಲೂ ಅವರ ವಾಕ್ಶಕ್ತಿ ಪರಿಣಾಮ ಬೀರಿತ್ತು!

ಕ : ''ಮುನಿಸಿಪಲ್ ಕಾರ್ಪೊರೇಷನ್‌ಗೆ RTI ಆಕ್ಟ್ ಪ್ರಕಾರ ಈ ನಮ್ಮ ಪಾರ್ಕಿನ ಉಸ್ತುವಾರಿ ಖರ್ಚಿನ ಬಗ್ಗೆ ಮಾಹಿತಿ ಕೇಳಿದ್ದೆ. ಇನ್ನೂ ಕೊಟ್ಟಿಲ್ಲ ನೋಡಿ!''

ಗ : ''ಭಾಯಿ ಈ ಭೂಮಿಯೇ ತಿರುಗು ಮುರುಗಾದರೂ ಆ ಮಾಹಿತಿ ಸಿಗುವುದಿಲ್ಲ! ಅಂದ ಹಾಗೆ ನಾಡಿದ್ದು ನಡೆಯುವ ಕಾಲೋನಿ ಸ್ಪರ್ಧೆಯಲ್ಲಿ ಭಾಗವಹಿಸುತ್ತೀಯ?''

ಕ : ''ಛೆ ಛೆ! ಖಂಡಿತ ಬೇಡ! ಸೀನಿಯರ್ ಸಿಟಿಜನ್ ಸ್ಪರ್ಧೆಗೆ ಹೋಗಲು ನಮಗೆ ಯಾಕೆ ಬೇಕು?''

ಚ : ''ಯಾಕಪ್ಪ? ನೀನೇನು ತರುಣನೆ? income tax ಕೊಡುವಾಗ ಸೀನಿಯರ್ ಸಿಟಿಜನ್ rebate ತೊಗೊಳ್ಳುವುದಿಲ್ಲವೇ?''

ಕ : ''ಹೇ ಹೇ! ಇನ್ಕಮ್ ಟ್ಯಾಕ್ಸ್ ಮಾತು ಬೇರೆ, ಸೀನಿಯರ್ ಸಿಟಿಜನ್ ಸ್ಪರ್ಧೆ

ಅಂದರೆ ನನ್ನ ಶ್ರೀಮತಿಗೆ ಎಲ್ಲರೂ ನನ್ನನ್ನು ಅಂಕಲ್ ಎಂದು ಕರೆಯುವುದು ಅವಮಾನವಂತೆ. ಮೂವತ್ತು ವರ್ಷದ ಮಹಿಳೆಯರೆಲ್ಲ, ಕಂ ಆನ್ ಅಂಕಲ್, ಯು ಕ್ಯಾನ್ ಡೂ ಇಟ್ ಎನ್ನುತ್ತಾ ಚಪ್ಪಾಳೆ ಹೊಡೆಯುವುದು ಅವಳಿಗೆ ತುಂಬಾ ಬೇಜಾರು!''

ಖ : ''ಹೋಗಲಿ ಬಿಡು ಭಾಯಿ, ನಾವಿಬ್ಬರೂ ಕ್ವಿಜ್ ಪ್ರೋಗ್ರಾಮ್ ನಡೆಸೋಣ. ನಮ್ಮ ಸಾಮಾನ್ಯ ಜ್ಞಾನ ತೋರಿಸಿ ಬಿಡೋಣ!''

ಗ : ''ಅಯ್ಯೋ ಬೇಡಪ್ಪ! ಹೋದ ಪ್ರೋಗ್ರಾಮ್‌ನಲ್ಲಿ, ಎಂಟನೇ ಸ್ಟ್ಯಾಂಡರ್ಡ್‌ನ ಇಬ್ಬರು ಮಕ್ಕಳು ನಮ್ಮ ಎಲ್ಲ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿ, ಈಗ ನೀವು ನಮ್ಮ ಪ್ರಶ್ನೆಗಳಿಗೆ ಉತ್ತರ ಹೇಳಿ ನೋಡೋಣ ಎಂದು. ನಮ್ಮೆಲ್ಲರನ್ನೂ ಫೂಲ್ ಮಾಡಿದ್ದು ಇನ್ನೂ ಯಾರೂ ಮರೆತಿಲ್ಲ!''

ಚ : ''ಭಾಯಿ, ನಿಮ್ಮ ಸ್ಟಾಕ್ ಬ್ರೋಕರ್ ಕೊಟ್ಟ ಟಿಪ್‌ನಂತೆ ಟಾಟಾ ಸ್ಟೀಲ್ ಶೇರ್ ಮೇಲೆ ಹೋಗುತ್ತಿದೆ. ನನ್ನ ಹೋಲ್ಡಿಂಗ್ 6% ಹೆಚ್ಚಿದೆ. ಮುಂದಿನ ವಾರ ಅವರನ್ನು ನಮ್ಮ ಕಾಲೋನಿಗೆ ಕರೆಸಿ, ಅವರ ಲೆಕ್ಚರ್ ಏರ್ಪಡಿಸೋಣ!''

ಕ : ''ಇಲ್ಲ ಇಲ್ಲ ಮುಂದಿನ ವಾರ. ನನ್ನ ಫೈನಾನ್ಶಿಯಲ್ ಪ್ಲಾನರ್ ಬಂದು ಮ್ಯೂಚುಯಲ್ ಫಂಡ್ಸ್ ಬಗ್ಗೆ ಲೆಕ್ಚರ್ ಕೊಡುವರು. ನಿಮ್ಮ ಏಜೆಂಟ್ ಅನ್ನು ಇನ್ನೊಂದು ಸಲ ಕರೆಯೋಣ!''

ತ : ''ಸ್ವಾಮಿ ನಿಮ್ಮ ಥೀಸಿಸ್ ಎಲ್ಲಿಯ ತನಕ ಬಂದಿತು? ನನ್ನ ಗೈಡ್ ಊರಿಗೆ ಹೋಗಿದ್ದಾರೆ. ಮುಂದಿನವಾರ ನಾವಿಬ್ಬರೂ ಯೂನಿವರ್ಸಿಟಿಗೆ ಹೋಗೋಣವೆ?''

ಸ್ವಾಮಿ : ''ಖಂಡಿತ ಹೋಗೋಣ! ಅಂದ ಹಾಗೆ ಇಂದಿನ ಎಕನಾಮಿಕ್ ಟೈಮ್ಸ್ ನೋಡಿದ್ದೀರಾ? ಅದರಲ್ಲಿ ನನ್ನ ಹಳೆಯ ಸಹೋದ್ಯೋಗಿ ಒಳ್ಳೆಯ ಆರ್ಟಿಕಲ್ ಬರೆದಿದ್ದಾರೆ. ಮುಂಬರುವ ಕಾಲದಲ್ಲಿ, ಹಣ ಯಾವ ರೀತಿ ಮಾರ್ಪಡುತ್ತದೆ ಎಂದು ಚೆನ್ನಾಗಿ ವಿವರಿಸಿದ್ದಾರೆ.''

ಗ : ''ನೀವು ಟೈಮ್ಸ್ ಆಫ್ ಇಂಡಿಯಾದ ಮಧ್ಯ ಪುಟ ಓದಿದ್ದೀರಾ? ಒಳ್ಳೆಯ ವಿಷಯ. ವೃದ್ಧಾಪ್ಯ ಮತ್ತು ಅರ್ಥ ವ್ಯವಸ್ಥೆಯ ಬಗ್ಗೆ. ಯಾರೋ ಡಾಕ್ಟರ ಚಂದ್ರಮತಿ ಎನ್ನುವರು ಬರೆದ ಲೇಖನ. ತುಂಬಾ ಚೆನ್ನಾಗಿದೆ.''

ಖ : ''ಹಹ, ಹಹ! ಚಂದ್ರಮತಿ ಎಂಬ ಹೆಸರಿನವರು ಅದು ಹೇಗೆ ಲೇಖನ ಬರೆಯಲು ಸಾಧ್ಯ?''

ಕ : ''ಸಾರೀ, ನಿನ್ನ ಲಾಜಿಕ್ ಅರ್ಥವಾಗಲಿಲ್ಲ, ಸ್ವಲ್ಪ ವಿವರಿಸಿ ಹೇಳು.''

ಖ : ಅಲ್ಲಾರೀ, ಚಂದ್ರ ಒಂದು ಉಪಗ್ರಹ. ಅದಕ್ಕೆ ತನ್ನದೇ ಆದ ಬೆಳಕಿಲ್ಲ, ಸೂರ್ಯನ ಬೆಳಕನ್ನೇ ಪ್ರತಿಬಿಂಬಿಸುತ್ತದೆ. ಶೈನಿಂಗ್ ಇನ್ ಬಾರೋಡ್ ಫೆದರ್ಸ್!

ಚ : ಚಂದ್ರ ಭೂಮಿಯ ಸುತ್ತ ತಿರುಗುತ್ತದೆ ಅರ್ಥವೇ ಇಲ್ಲದೆ! ಹದಿನೈದು ದಿನಕ್ಕೆ ಹುಣ್ಣಿಮೆ, ಇಲ್ಲವೇ ಅಮಾವಾಸ್ಯೆ! ಪ್ರತಿದಿನ ಬೇರೆ ಗಾತ್ರ. ಒಂದು ದಿನ ಕೋರೆ, ಇನ್ನೊಂದು ದಿನ ದುಂಡಗೆ!

ಎಲ್ಲರೂ ನಗುತ್ತಾರೆ....

ಖ : ''ರಿಸರ್ಚ್ ಪ್ರಕಾರ ಚಂದ್ರನ ಈ ರೀತಿಯ ಕೊಂಕು ನಡವಳಿಕೆ ಸಮುದ್ರದ ತೆರೆಗಳ ಮೇಲೆ ಪರಿಣಾಮ ಬೀರಿದರೆ ಮನುಷ್ಯ ಹಾಗೂ ಪ್ರಾಣಿಗಳ ನಡವಳಿಕೆಯ ಮೇಲೂ ಪರಿಣಾಮ ಬೀರುತ್ತದೆ! ಇಂತಹ ಚಂದ್ರ ಕೊಂಕು ತಾನೆ.''

ಸ್ವಾಮಿ : ''ಚಂದ್ರನ ಬೆಳಕು ತಂಪಾದ ಬೆಳಕು. ಅದರ ಮೇಲೆ ಎಷ್ಟು ಕವಿಗಳು ಕವಿತೆ ರಚಿಸಿದ್ದಾರೆ!''

ಗ : ''ಸ್ವಾಮಿ, ಚಂದ್ರಮುಖಿ ಗೊತ್ತು ತಾನೇ? ಮುಖದ ತುಂಬಾ ಮೊದಮೆಗಳು!!!''

ಮತ್ತೆ ಎಲ್ಲರ ನಗು!

ಕ : ''ಭಾಯಿ, ಚಂದ್ರಮುಖಿ ನಮ್ಮ ದೇವದಾಸನ ಪ್ರೇಯಸಿ ತಾನೇ? ಪಾರೋ ಮದುವೆಯಾಗಿ ಹೋದ ಮೇಲೆ ಚಂದ್ರಮುಖಿ ದೇವದಾಸನಿಗೆ ಆಶ್ರಯ ಕೊಟ್ಟಳಲ್ಲ! ಆಹಾ ಎಂಥಹ ಪ್ರೇಮ!''

ಗ : ''ಚಂದ್ರಮತಿಯೆಂದರೆ ಏನು ಅರ್ಥ? ಚಂದ್ರನಂತೆ ಮತಿ ಇರುವವಳು! ಚಂದ್ರನ ಮತಿ ಎಂಥದು ಸ್ವಾಮಿ? ಇವತ್ತು ಕಾಣಿಸುವುದಿಲ್ಲ! ನಾಳೆ ಕೋರೆ! ನಾಡಿದ್ದು ದೊಡ್ಡ ಕೋರೆ! ಹತ್ತು ದಿವಸದ ನಂತರ ಸೊಟ್ಟ, ಹದಿನೈದು ದಿನದ ನಂತರ ಪೂರ್ತಿ ಗುಂಡಗೆ! ರೂಪವೇ ಸರಿಯಿಲ್ಲ! ಆಕಾರವೇ ಸರಿಯಿಲ್ಲ! ಸ್ವಂತ ಬೆಳಕಿಲ್ಲ! ಇನ್ನು ಮತಿ ಎಂಥದು? ಹುಚ್ಚರು ಹುಣ್ಣಿಮೆಯ ದಿನ ಯಾವ ರೀತಿ ಆಡುತ್ತಾರೆಂದು ನೋಡಿ!''

ಕ : ''ಭಾಯಿ, ಯಾಕೋ ನಿನಗೆ ಚಂದ್ರಮತಿಯ ದಂಶನ ಆಗಿರುವ ಹಾಗಿದೆ!''

ಎಲ್ಲರೂ ಇನ್ನೂ ಗಹಗಹಿಸಿ ನಗುತ್ತಾರೆ....

ಮುಂದೆ ಏನು ನಡೆಯಿತು ಎಂದು ಹೇಗೆ ತಿಳಿಸಲಿ? ನನಗೆ ಸರಿಯಾಗಿ ಅರಿವಾಗುವ ಮೊದಲೇ ಪಕ್ಕದಲ್ಲಿ ಎಕ್ಸರ್ಸೈಜ್ ಮಾಡುತ್ತಿದ್ದ ಮಹಿಳೆ ಈ ಪುರುಷರ ಮುಂದೆ ಹಾಜರಾದರು! ರೀಬಾಕ್ ಟ್ರ್ಯಾಕ್ ಸೂಟ್, ಟಾಮಿ ಹಿಲ್ ಫಿಗರ್‌ನ ಸ್ಪೋರ್ಟ್ಸ್ ಶೂಸ್! ತುಂಬಾ ಗತ್ತಿನ ಮಹಿಳೆ!

ಮಹಿಳೆ : ''ಮಹಾಶಯರೇ! ಗುಡ್ ಮಾರ್ನಿಂಗ್! ನಿಮ್ಮ ಭಾಷೆ ಮತ್ತು ಭಾಷಣ ಕೇಳಿಸಿಕೊಳ್ಳಲು ನನಗೇನೂ ಆಸೆಯಿರಲಿಲ್ಲ! ಆದರೆ ನಿಮ್ಮ ಧ್ವನಿ ಪ್ರವಾಹ ಎಷ್ಟು ದೂರ ತೇಲಿ ಬರುತ್ತಿತ್ತೆಂದರೆ ತನಗೆ ತಾನೇ ನನ್ನ ಕಿವಿಗಳ ಮೇಲೂ

ಅಪ್ಪಳಿಸಿದವು! ನಿಮ್ಮಲ್ಲಿ ಕೆಲವರು ನ್ಯೂಸ್ ಪೇಪರ್ ಓದುವ ಹವ್ಯಾಸ ಇಟ್ಟುಕೊಂಡಿರುವುದು ತಿಳಿದು ಸಂತೋಷವಾಯಿತು. ನಿಮ್ಮಲ್ಲಿ ಇಬ್ಬರು ಮಹಾಶಯರು ಮುಂಬೈ ಯೂನಿವರ್ಸಿಟಿಯಿಂದ PHd ಮಾಡುತ್ತಿರುವುದೂ ತಿಳಿಯಿತು! ಅಭಿನಂದನೆ!''

''ಅಂದ ಹಾಗೆ, ನೀವು ನನ್ನ ಲೇಖನ ಓದಿದ್ದಿರಿ ಎಂದೂ ಗೊತ್ತಾಯಿತು. ನನ್ನ ಹೆಸರು ಡಾಕ್ಟರ್ ಚಂದ್ರಮತಿ! ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಡಾಕ್ಟರೇಟ್ ತೆಗೆದುಕೊಂಡು ಇಲ್ಲಿ ದೇಶದ ಮಹಾ ಬ್ಯಾಂಕ್‌ನಲ್ಲಿ ಚೀಫ್ ಎಕಾನೋಮಿಸ್ಟ್ ಎಂಬ ಹುದ್ದೆಯಲ್ಲಿದ್ದೇನೆ!''

''ನೀವು ನನ್ನ ಹೆಸರಿನ ಬಗ್ಗೆ ತುಂಬಾ ತಲೆ ಕೆಡಿಸಿಕೊಂಡಿದ್ದಿರಿ ಅಲ್ಲವೇ? ನಮ್ಮ ತಂದೆ ಮತ್ತು ತಾಯಿ ಈಗ ಬದುಕಿದ್ದಿದ್ದರೆ ಅವರನ್ನೇ ಕೇಳಬಹುದಿತ್ತು! ಈ ಹೆಸರಿನ ಹಿಂದೆ ಅರ್ಥ ಏನು? ತರ್ಕ ಏನು? ಆದರೆ ಅವರಿಬ್ಬರೂ ಈಗ ಪೃಥ್ವಿಯ ಮೇಲೆ ಇಲ್ಲದಿರುವುದರಿಂದ ನನ್ನ ಹೆಸರಿನ ಬಗೆಗಿನ ಸಂದೇಹ ನಾವೇ ನಿವಾರಿಸೋಣ!''

''ನನ್ನ ತಂದೆಯ ಹೆಸರು ಚಂದ್ರಶೇಖರ್ ಮತ್ತು ತಾಯಿಯ ಹೆಸರು ಸುಮತಿಯೆಂದು. ನಾನು ಹುಟ್ಟಿದ ತಕ್ಷಣ ನನ್ನ ಅಜ್ಜಿ ಈ ಎರಡೂ ಹೆಸರುಗಳ ತುಣುಕುಗಳನ್ನು ಸೇರಿಸಿ ಚಂದ್ರಮತಿಯೆಂದು ನನಗೆ ನಾಮಕರಣ ಮಾಡಿದರನ್ತೆ. ಇನ್ನು ನಿಮ್ಮೆಲ್ಲರ ಅನಿಸಿಕೆಯಂತೆ ನಾನು ಮಂದಮತಿಯೂ ಅಲ್ಲ, ಹುಚ್ಚಿಯಂತೂ ಅಲ್ಲವೇ ಅಲ್ಲ! ನನ್ನ ಪದವಿ ಮತ್ತು ಬಿರುದುಗಳನ್ನು ನಿಮ್ಮ ಮುಂದೆ ಪ್ರಕಟಿಸಿ ಹೇಳಿ ನನ್ನನ್ನೇ ನಾನು ಕೀಳು ಮಾಡಿಕೊಳ್ಳಲಾರೆ!''

ನಮ್ಮ ಮಹಾಶಯರು ಒಬ್ಬೊಬ್ಬರೇ ತಲೆ ಕೆಳಗೆ ಮಾಡಿಕೊಂಡರು!

ಮುಂದಿನ ಪ್ರಶ್ನೆ ನನಗೆ ಆಶ್ಚರ್ಯ ತರಿಸಿತು!

ಡಾ. ಚಂದ್ರಮತಿ ಈಗ ನಾನು ''ಗ'' ಎಂಬ ಅಕ್ಷರದಿಂದ ಗುರುತಿಸಿದ ಮಹಾಶಯರ ಕಡೆಗೆ ನೋಡಿ ''ತಮ್ಮ ಹೆಸರು ಏನೆಂದು ಕೇಳಬಹುದೇ?'' ಎಂದರು.

''ಗ'' ಅವರು ಬೇಗನೆ ''ನನ್ನ ಹೆಸರು ರವಿ ಕುಮಾರ್'' ಎಂದರು.

ಡಾ. ಚಂದ್ರಮತಿ ''ಓಹ್! ಹಾಗಾದರೆ ನೀವು ಶನಿಯೋ ಅಥವಾ ಯಮಧರ್ಮರಾಜರೋ? ಅವರಿಬ್ಬರೂ ಸೂರ್ಯನ ಪುತ್ರರಲ್ಲವೇ?''

''ಗ'' ತಲೆ ತಗ್ಗಿಸಿ ಬಿಟ್ಟರು!

ನಮ್ಮ ನಾಯಕಿ ಅಲ್ಲಿಗೆ ಬಿಡಲಿಲ್ಲ!

ಡಾ. ಚಂದ್ರಮತಿ ''ಮಹಾಶಯರೇ, ಕುಂತಿಯ ಪುತ್ರ ಕರ್ಣನೂ ಸೂರ್ಯನ ಪುತ್ರ. ಈಗ ತಾವೇ ಹೇಳಿ, ತಮ್ಮ ಹೆಸರಿನ ಹಿಂದಿರುವ ಅರ್ಥ ಮತ್ತು ತರ್ಕ ಏನು ಎಂದು.''

ನಂತರ ಆ ಮಹಿಳೆ ವಾಪಸ್ಸು ತಮ್ಮ ಜಾಗಕ್ಕೇ ಹೋಗಿ ಏನೂ ಆಗೇ ಇಲ್ಲ ಎಂಬಂತೆ ಪುನಃ ವ್ಯಾಯಾಮ ಮಾಡತೊಡಗಿದರು!

ಭೇಷ್ ಮಹಿಳಾ ಶಕ್ತಿ ಎಂದು ಹೆಮ್ಮೆಪಟ್ಟುಕೊಂಡೆ.

**

# ಹೀಗೂ ಉಂಟೇ..

**– ವಸುಮತಿ ಉಡುಪ**

**ಡಾ**ಕ್ಟರ್ ಎರಡನೇಸಲ ತೋಳಿನ ಪಟ್ಟಿ ಬಿಗಿಮಾಡಿ ಪರೀಕ್ಷಿಸಿದರು. ಅನುಮಾನ ಇಲ್ಲ, ಬಿ.ಪಿ. ನಾರ್ಮಲ್‌ಗಿಂತಾ ಹೆಚ್ಚಾಗಿದೆ. ಡಾಕ್ಟರು ತೋಳಿಗೆ ಪಟ್ಟಿ ಸುತ್ತುವಾಗಲೇ ಶರಾವತಿಯ ಎದೆಬಡಿತ ಅವಳ ಕಿವಿಗೇ ಬೀಳುವಷ್ಟು ಏರಿಹೋಗಿತ್ತು. ಮನಸ್ಸನ್ನು ಎಷ್ಟು ಸಮಾಧಾನ ಸ್ಥಿತಿಗೆ ತಂದುಕೊಳ್ಳಲು ಯತ್ನಿಸಿದರೂ ಊಹೂಂ. ಏರೊತ್ತಡದ ಖಾಯಿಲೆಯ ಹಣೆಪಟ್ಟಿ ಹಚ್ಚಿಕ್ಕೊಳ್ಳಬೇಕಾಗುತ್ತದೆಯೇನೋ ಎನ್ನುವ ಆತಂಕ, ದಿಗಿಲು. ತನ್ಮೂಲಕ ಹುಟ್ಟಿಕ್ಕೊಳ್ಳಬಹುದಾದ ನಾನಾ ಖಾಯಿಲೆಗಳ ಕುರಿತಾದ ನೆನವರಿಕೆ, ಅಂಜಿಕೆ.

''ಬಿ.ಪಿ. ಜಾಸ್ತಿ ಉಂಟಮ್ಮಾ. ಹೀಗೇ ಇದ್ರೆ ಮಾತ್ರೆ ತಗೋಬೇಕಾಗುತ್ತೆ.'' ಡಾಕ್ಟರ್ ಬಾಯಿಂದ ಆಣಿಮುತ್ತು ಉದುರಿತು. ಶರಾವತಿ ಬೆವೆತಿದ್ದ ಮುಖ ವರೆಸಿಕೊಳ್ಳುತ್ತಾ ಉಮ್ಮಳ ತಡೆದುಕೊಂಡಳು.

''ನೀವು ಚೆಕಪ್ ಮಾಡ್ತಿರಬೇಕಾದ್ರೆ ತುಂಬಾ ಹೆದರಿಕೆಯಾಗ್ಬಿಟ್ಟಿತ್ತು ಡಾಕ್ಟ್ರೇ. ಅದರಿಂದೇನಾದ್ರೂ ಬಿ.ಪಿ. ಜಾಸ್ತಿಯಾಗಿರ್ಬೋದಾ?''

''ಹಾಗೇನಾಗಲ್ಲ, ನೋಡೋಣ. ಇನ್ನು ಎಂಟ್ಹತ್ತು ದಿನ ಬಿಟ್ಕೊಂಡು ಬನ್ನಿ. ಪರೀಕ್ಷೆ ಮಾಡೋಣ. ಆಮೇಲೆ ಮತ್ತೆ ಎಂಟ್ಹತ್ತು ದಿನ ಬಿಟ್ಟು ನೋಡಿ ಬಿ.ಪಿ. ಹಾಗೇ ಇದ್ರೆ ಮಾತ್ರೆ ಶುರುಮಾಡ್ಬೇಕು. ಒಂದ್ಸಲ ಶುರು ಮಾಡಿದ್ರೆ ಲೈಫ್‌ಲಾಂಗ್ ಮಾತ್ರೆ ತಗೋಬೇಕಾಗುತ್ತಮ್ಮಾ. ಅದಕ್ಕೇ ಕಾದು ನೋಡೋಣ ಅಂದಿದ್ದು..''

''ತುಂಬಾ ಟೆನ್ಷನ್ ಮಾಡ್ಕೋತೀರಾ? ಯಾವುದನ್ನೂ ಸೀರಿಯಸ್ ಆಗಿ ತಗೋಬಾರ್ದು..''

''ಹಾಗೇನಿಲ್ಲ ಡಾಕ್ಟ್ರೇ. ಮನೇಲಿ ಆರಾಮಾಗಿದಾಳೆ. ಯಾವ ತಾಪತ್ರಯ ಇಲ್ಲ'' ನಡುವೆ ಬಾಯಿ ಹಾಕಿದ ವಿಘ್ನೇಶ.

''ಉಪ್ಪು ಕಡಿಮೆ ಮಾಡಿ. ಉಪ್ಪಿನಕಾಯಿ ಬಿಲ್‌ಕುಲ್ ಬೇಡ. ಬೆಳಿಗ್ಗೇನೋ, ಸಂಜೆ ಹೊತ್ತೋ ಅರ್ಧ ಘಂಟೆ ವಾಕಿಂಗ್ ಮಾಡಿ.''

ಗೋಣು ಹಾಕಿದಳು ಶರಾವತಿ.

''ಎಷ್ಟಮ್ಮಾ ವಯಸ್ಸು?''

''ನಲವತ್ತೈದು..''

''ಆಯ್ತು, ಎಂಟ್ಹತ್ತು ದಿನ ಬಿಟ್ಕೊಂಡು ಬನ್ನಿ. ನಂಗೇನೋ ಖಾಯಿಲೆ ಇದೆ ಅಂದ್ಕೊಂಡು ಚಿಂತೆ ಮಾಡ್ತಿರ್ಬೇಡಿ. ಯಾವಾಗಿನ ಹಾಗೆ ನಿಮ್ಮ ಕೆಲಸ ನೀವು ಮಾಡ್ಕೊಂಡಿರಿ.''

ಗಂಡ, ಹೆಂಡತಿ ಎದ್ದು ನಿಂತರು.

''ಎಷ್ಟು ಡಾಕ್ಟ್ರೇ?'' ಎನ್ನುತ್ತಾ ವಿಘ್ನೇಶ ಜೇಬಿನಿಂದ ನೋಟು ತೆಗೆದ.

★★★

ಎಲ್ಲಕ್ಕೂ ಮೂಲ ಶರಾವತಿ ಅವತ್ತು ಬೆಳಿಗ್ಗೆ ಎದ್ದಾಗ ತಲೆ ಸುತ್ತಿ, ಕಣ್ಣು ಕತ್ತಲಿಟ್ಟಂತಾಗಿದ್ದು. 'ಒಂದ್ಸಲ ಬಿ.ಪಿ. ಚೆಕ್ ಮಾಡ್ಸೋಣ' ಎಂದು ಮುತುವರ್ಜಿಯಿಂದ ಹೆಂಡತಿಯನ್ನು ಡಾಕ್ಟರ ಬಳಿ ಕರೆದುಕೊಂಡು ಬಂದಿದ್ದ ವಿಘ್ನೇಶ. ತನಗೆ ಬಿ.ಪಿ. ಎಂದು ಗೊತ್ತಾಗಿದ್ದೇ ಶರಾವತಿ ಎಷ್ಟು ಮಂಕಾಗಿಬಿಟ್ಟಳು ಅಂದರೆ ತಮ್ಮ ಪರಿಚಿತರಲ್ಲಿ ಯಾರ್‍ಯಾರಿಗೆ, ಎಷ್ಟೆಷ್ಟು ಚಿಕ್ಕ ವಯಸ್ಸಲ್ಲಿ ಬಿ.ಪಿ. ಅಮರಿಕೊಂಡಿತು ಮತ್ತು ಅವರೆಲ್ಲಾ ಈಗಲೂ ಎಷ್ಟು ಲವಲವಿಕೆ, ಚಟುವಟಿಕೆಯಿಂದಿದ್ದಾರೆ ಎನ್ನುವ ಕುರಿತು ವಿಘ್ನೇಶ ನೆನಪು ಮಾಡಿಕೊಂಡು ಹೇಳಿ ಹೇಳಿ ಅವಳ ಭೀತಿ ಕಳೆಯಲು ಯತ್ನಿಸಿದ್ದ. ''ಉಪ್ಪು ಕಡಿಮೆ ಮಾಡಿ, ವಾಕಿಂಗ್ ಮಾಡಿದ್ರೆ ಸರಿಯಾಗ್ಬಿಡುತ್ತೆ ಕಣೇ, ನೋಡ್ತಿರು..'' ಎನ್ನುವ ಆಶಾಭಾವನೆಯನ್ನು ಅವಳಲ್ಲಿ ಪ್ರಚೋದಿಸಿದ್ದ. 'ಹೌದು' ಅನಿಸಿತ್ತು ಶರಾವತಿಗೂ. ಮುಖ ಒಂದ್ಸೊಲ್ಪ ಗೆಲುವಾಗಿತ್ತು.

ಅವತ್ತಿನಿಂದ ಗಂಡಯ್ಯನೂ ಹೆಂಡತಿಯ ಜೊತೆ ಚಪ್ಪೆ ಊಟಕ್ಕೆ ಒಗ್ಗಿಕೊಂಡ. ವಾಕಿಂಗಿಗೆ ಜೊತೆ ಕೊಟ್ಟ. ಅಡುಗೆಗೆ ಕೈ ಹಿಡಿತ ಮಾಡಿ ಉಪ್ಪು ಉದುರಿಸುವಾಗಲೆಲ್ಲಾ ಅಷ್ಟಷ್ಟು ತನ್ನ ಬಿ.ಪಿ. ಕಂಟ್ರೋಲಿಗೆ ಬರುತ್ತಿದೆಯೆಂದು ಕಲ್ಪಿಸಿಕೊಂಡು ಶರಾವತಿ ಮನಸ್ಸಿಗೆ ಸಮಾಧಾನ ತಂದುಕೊಂಡಳು.

★★★

ಕಳೆಯಿತು ದೀರ್ಘವಾದ ಹತ್ತು ದಿನ. ಮತ್ತೊಮ್ಮೆ ತಪಾಸಣೆ ನಡೆದು ಶರಾವತಿಯ ಬಿ.ಪಿ. ಮುಂಚೆ ಹೇಗಿತ್ತೋ ಹಾಗೇ ಇರುವುದು ಸಾಬೀತಾಯ್ತು. ''ಇನ್ನು ಹತ್ತು ದಿನ ಬಿಟ್ಕೊಂಡು ಬನ್ನಿ'' ಎಂದು ಡಾಕ್ಟರು ಹೇಳಿದಾಗ 'ಆಯ್ತು, ಸತ್ಯ ಒಪ್ಪಿಕೊಳ್ಳುವುದೊಂದೇ ಮಾರ್ಗ' ಎನ್ನುವ ಹತಾಶೆಯ ಸ್ಥಿತಿಗೆ ಶರಾವತಿ ತಲುಪಿದ್ದಳು.

''ಬೆಳ್ಳುಳ್ಳಿ ತಿಂದ್ರೆ ಬಿ.ಪಿ. ಕಡಿಮೆಯಾಗುತ್ತಂತೆ ಕಣೇ. ಕೊಲೀಗ್ ಹೇಳಿದ್ರು..'' ಎನ್ನುತ್ತಾ ವಿಘ್ನೇಶ ಕಾಲು ಕೆ.ಜಿ. ಬೆಳ್ಳುಳ್ಳಿಗೆಡ್ಡೆಯನ್ನು ಮನೆಗೆ ತಂದಾಗ ಶರಾವತಿಯ ಬಿ.ಪಿ. ಮತ್ತಷ್ಟು ಏರಿತು.

''ಆಗ್ಲೇ ಆಫೀಸ್‌ನಲ್ಲೆಲ್ಲಾ ಟಾಂಟಾಂ ಹೊಡೆದ್ಬಿಟ್ರಾ?'' ರೇಗಿದಳು ಶರಾವತಿ.

'ಯಾಕೆ? ಹೇಳಿದ್ರೆ ಏನಾಗುತ್ತೆ?' ಬಾಯ್ಬಿಟ್ಟು ಕೇಳದಿದ್ದರೂ ತಲೆ ಕೆರೆದುಕೊಂಡ ವಿಘ್ನೇಶ.

ಆಯ್ತು. ಅಪರೂಪಕ್ಕೆ ಕೆಲಕೆಲವು ಅಡಿಗೆಗಳಿಗೆ ಬಳಕೆಯಾಗುತ್ತಿದ್ದ ಬೆಳ್ಳುಳ್ಳಿ ದಿನನಿತ್ಯದ ಅಡುಗೆಯಲ್ಲಿ ರಾರಾಜಿಸಿತು. ಕೈ ಸಡಿಲಮಾಡಿ ಬೆಳ್ಳುಳ್ಳಿಗೆ ಅಗ್ರಪಟ್ಟ ಕಟ್ಟಿದಳು ಶರಾವತಿ.

ನಾಳೆ ಮತ್ತೊಂದು ತಪಾಸಣೆ. ಬಿ.ಪಿ. ಇಳಿಯದಿದ್ದರೆ ಮಾತ್ರೆ ಶುರು. ಹಿಂದಿನದಿನ ಹೆಂಡತಿಗೆ ತಿಳಿಯದಂತೆ ಡಾಕ್ಟರನ್ನು ಭೇಟಿಯಾದ ವಿಘ್ನೇಶ.

''ಒಂದು ಉಪಕಾರ ಆಗ್ಬೇಕಿತ್ತು ಡಾಕ್ಟ್ರೆ. ಶಂಖದಿಂದ ಬಂದರೇ ತೀರ್ಥ ಅಂತಾರಲ್ಲ..'' ಪೀಠಿಕೆ.

''ಏನದು, ಹೇಳ್ರೀ..''

''ನಮ್ಮ ಶರಾವತಿಗೆ ಬಿ.ಪಿ. ಹಾಗೇ ಇದ್ರೆ ಮಾತ್ರೆ ಶುರುಮಾಡೋ ಮೊದಲು ನೀವು ಒಂದು ಸಲಹೆ ಕೊಡ್ಬೇಕು. ಆಮೇಲೆ ಹತ್ತು ದಿನ ಕಾದು..''

''ಡಾಕ್ಟ್ರು ನಾನಾ, ನೀವಾ?''

''ಹಂಗಲ್ಲ ಡಾಕ್ಟ್ರೆ, ತಪ್ಪು ತಿಳ್ಕಂಬೇಡಿ. ಅವಳ ಬಿ.ಪಿ. ಜಾಸ್ತಿಯಾಗಿದ್ದು ಇದಕ್ಕೇ ಇರಬಹುದು ಅಂತ ನಂಗೆ ಅನುಮಾನ..''

ಡಾಕ್ಟರ ಕುತೂಹಲ ಕೆರಳಿತು.

''ಒಗಟಿನ ಹಾಗೆ ಮಾತಾಡ್ಬೇಡಿ. ಅದೇನು ಹೇಳ್ಬೇಕೋ ಬೇಗ ಹೇಳಿ ಮುಗಿಸಿ..''

''ಟಿ.ವಿ. ನೋಡ್ಬಾರ್ದೂಂತ ಅವಳಿಗೆ ಸ್ಟ್ರಿಕ್ಟ್ ಆಗಿ ಹೇಳಿ ಡಾಕ್ಟ್ರೆ. ಆ ಧಾರಾವಾಹಿಗಳಿಂದ್ಲೇ ಅವಳ ಬಿ.ಪಿ. ಏರಿದ್ದು ಅಂತ ನಂಗನ್ನುತ್ತೆ. ಸುಮ್ಸುಮ್ನೆ ಟೆನ್ಷನ್ ಮಾಡ್ಕೋತಾಳೆ. 'ಹಾಗಿರ್ಬೇಕಿತ್ತು, ಹೀಗನ್ಬೇಕಿತ್ತು, ಅಷ್ಟೂ ಗೊತ್ತಾಗಲ್ವಾ?' ಅಂತಾಳೆ. ಅವರೋ ಬೇಕ್‌ಬೇಕೂಂತ್ಲೇ ಹೇಳ್ಬೇಕಾಗಿದ್ದನ್ನ ಬೇಗ ಹೇಳ್ದೆ ಸತಾಯಿಸ್ತಾರೆ. ಕುರ್ಚಿಯ ತುದೀಲಿ ಕೂರೋ ಹಾಗೆ ಮಾಡ್ತಾರೆ. ನಾಳೆ, ನಾಡಿದ್ದು ಅಂತ ಮುಂದಕ್ಕೆ ಹಾಕ್ತಾರೆ.''

''ಸಾಕು ಮಾರಾಯ್ರೇ, ಸುಮ್ನೆ ತಲೆ ತಿನ್ಬೇಡಿ..''

''ಇನ್ನೊಂಚೂರು ಹೇಳೋದಿದೆ ಡಾಕ್ಟ್ರೇ, ಹೇಳ್ದೆ ಕೇಳ್ದೆ ಕರೆಂಟು ಕೈ ಕೊಡೋದು ಇತ್ತೀಚೆಗೆ ಮಾಮೂಲು. ಐನ್ ಹೊತ್ತಿಗೆ ಕರೆಂಟು ಹೋಯ್ತೂಂದ್ರೆ ತನ್ನ ಪ್ರೀತಿಯ ಧಾರಾವಾಹಿ ನೋಡೋಕಾಗ್ದೆ ಇವಳು ಹುಚ್ಚು ಹಿಡಿದ ಹಾಗಾಡ್ತಾಳೆ. ಕರೆಂಟ್ ಆಫೀಸಿನೋರಿಗೆ ಹಿಡಿಶಾಪ..''

''ಧಾರಾವಾಹಿ ನೋಡಿದ್ರೂ ಕಷ್ಟ, ನೋಡ್ದಿದ್ರೂ ಕಷ್ಟ ಅಂತಿದೀರಾ?''

''ನೋಡೋದು ಚಟ ಆದ್ರೆ ಕಷ್ಟ ಅಂತಿದೀನಿ. ಚೆನ್ನಾಗಿದ್ರೂ ನೋಡೋದು, ಚೆನ್ನಾಗಿಲ್ದಿದ್ರೂ ಬೈಕೋತಾ ನೋಡೋದು. ಎಷ್ಟು ಕೆಟ್ಟದಾಗಿ ತೆಗೀತಾರೆ ಅಂತ ಬೈಯೋಕೇಂತ್ಲೇ ನೋಡೋಷ್ಟು ಅಡಿಕ್ಟ್ ಆಗಿದ್ದಾಳೆ ಅಂದ್ರೆ ನಂಬ್ತೀರಾ ಡಾಕ್ಟ್ರೇ?'' ಅಂದ ವಿಘ್ನೇಶ.

'ಟೀವಿ ವೀಕ್ಷಕರಲ್ಲಿ ಬಿ.ಪಿ. ಪೇಷಂಟ್‌ಗಳ ಸಂಖ್ಯೆ ಜಾಸ್ತಿಯಾಗಿದೆಯಾ?' ಎಂದು ಡಾಕ್ಟರ ತಲೆಯಲ್ಲೂ ಹುಳ ಮಿಜಿಗುಡತೊಡಗಿತು. 'ಪಿ.ಎಚ್.ಡಿ. ಮಾಡೋದಾದ್ರೆ ಸಂಶೋಧನೆಗೆ ಫಸ್ಟ್‌ಕ್ಲಾಸ್ ಸಬ್ಜೆಕ್ಟು.' ಎನ್ನುವ ಯೋಚನೆ ಹೊಳೆದಿದ್ದಕ್ಕೆ ಡಾಕ್ಟರು ಥ್ರಿಲ್ ಆಗಿಬಿಟ್ಟರು. 'ಉಪ್ಪು, ಉಪ್ಪಿನಕಾಯಿಯ ಜೊತೆ ಟಿ.ವಿ. ಧಾರಾವಾಹಿ ಸೇರಿಸಿದರೆ ಪರಿಣಾಮ ಏನಾಗಬಹುದು' ಎನ್ನುವ ಕುರಿತು ತಲೆಕೆಡಿಸಿಕೊಳ್ಳುವಾಗ ಡಾಕ್ಟರನ್ನು ಕಾಡುತ್ತಿತ್ತು ಪ್ರಶ್ನೆ, 'ಹೀಗೂ ಉಂಟೇ?'

**

# ಮನೋಬಲ.....

**- ಎಚ್. ಗೋಪಾಲಕೃಷ್ಣ**

**ವ**ರ್ಷಕ್ಕೆ ಎರಡು ಸಲವೋ ಮೂರು ಸಲವೋ ಇಂಜಿನಿಯರಿಂಗ್ ಓದಿರುವ ವಿದ್ಯಾರ್ಥಿಗಳನ್ನು ಸೇವೆಗೆ ಅಂತ ಆಯ್ಕೆ ಮಾಡಿಕೊಳ್ಳುವ ಪದ್ಧತಿ ಸರಿ ಸುಮಾರು ಎಲ್ಲ ಸಾರ್ವಜನಿಕ ಉದ್ದಿಮೆಗಳಲ್ಲೂ ಚಾಲ್ತಿಯಲ್ಲಿದೆ. ಅಂಥಹ ಭಾವೀ ಇಂಜಿನಿಯರುಗಳಿಗೆ ತರಬೇತಿ ನೀಡುವುದಕ್ಕೆ ಎಂದೇ ಕೆಲವು ಸಂಸ್ಥೆಗಳು ಇಡೀ ಉತ್ತರ ಭಾರತದಲ್ಲಿ ಹಬ್ಬಿವೆ. ನಮ್ಮ ದಕ್ಷಿಣದ ಕಡೆ ಇವು ಅಷ್ಟು ಕಾಣಿಸುವುದಿಲ್ಲ. ಅಖಿಲ ಭಾರತ ಮಟ್ಟದ ಪರೀಕ್ಷೆಯನ್ನು ಎದುರಿಸಿ ಅದರಲ್ಲಿ ರ್‍ಯಾಂಕು ಪಡೆದು ಬರುವ ಮಕ್ಕಳ ಐ ಕ್ಯೂ ಗಮನಿಸಿದರೆ ಇವು ಹೇಗೆ ಪಾಸ್ ಆದವು ಅಂತ ಅನಿಸುವುದೂ ಸಹಜ. ಅದರಲ್ಲೂ ನಮ್ಮ ಸ್ಥಳೀಯ ಹುಡುಗರ ಮುಂದೆ ಇವೇನು ಅಂತ ಅನಿಸುತ್ತೆ. ಸುಮಾರು ಸಲ ಈ ವಿಷಯ ಕುರಿತ ಹಾಗೆ ತಿಳಿದವರ ಹತ್ತಿರ ಚರ್ಚೆ ನಡೆಸಿ ಒಂದು ಉತ್ತರ ಪಡೆದು ಕೊಂಡಿದ್ದೀನಿ – ನಮ್ಮ ಹುಡುಗರು ಈ ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡುಲ್ಲ.... ಅಂತ. ಸರಿ, ಚೆನ್ನಾಗಿ ಮಾಡುಲ್ಲ ಅಂದರೆ ಯಾಕೆ ಚೆನ್ನಾಗಿ ಮಾಡುಲ್ಲ ಅಂತ ಯೋಚಿಸಿದ್ದೀರಾ? ಅಂತ ನನ್ನ ಪ್ರಶ್ನೆ.

ನಮ್ಮಲ್ಲಿ ತರಬೇತಿ ನೀಡುವ ಸಂಸ್ಥೆಗಳು ಇಲ್ಲವಲ್ರೀ... ಅದಕ್ಕೇ ನಮ್ಮೋವಕ್ಕೆ ಪರೀಕ್ಷೆ ಪಾಸ್ ಮಾಡೋದು ಕಷ್ಟ..!

ಈ ಕಾರಣದಿಂದಲೇ ಇಲ್ಲೇ ಅಂಥಹ ಹಲವಾರು ಸಂಸ್ಥೆಗಳು ಹುಟ್ಟಿದವು ಮತ್ತು ತುಂಬಾ ಕಡಿಮೆ ಜನ ಅದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಇದು ಯಾಕೆ ಅಂದರೆ ಪರೀಕ್ಷೆ ಪಾಸು ಆದಮೇಲೆ ಕೆಲಸ ಸಿಗುತ್ತೋ ಇಲ್ಲವೋ ಅದರಿಂದ ಅದಕ್ಕೆ ಯಾಕೆ ಅಷ್ಟು ಹಣ ಕೊಡಬೇಕು ಅನ್ನುವ ಹೊಸ ಯೋಚನೆ!

ಈ ಮನೋಭಾವನೆಯಲ್ಲೇ ನಾವು ನಮ್ಮ ದಿನನಿತ್ಯದ ವ್ಯವಹಾರ ತೂಗಿಸಿಕೊಂಡು ಹೋಗುವವರು – ಅಂದರೆ ನಮ್ಮ ಫೈಲ್ಯೂರಿಗೆ ಒಂದು ಕಾರಣ ಹುಡುಕುತ್ತೇವೆ ಮತ್ತು ಅದರಿಂದ ಸಮಾಧಾನ ಪಡೆದುಕೊಳ್ಳುತ್ತೇವೆ! ಸಕ್ಸೆಸ್ ಆಗಲು ಅದೇನು ಸಿದ್ಧತೆ ಮಾಡಿಕೊಳ್ಳಬೇಕೋ ಅದು ನಮ್ಮ ಮನಸ್ಸಿಗೆ ಬರುವುದು ಅಪರೂಪ. ಕಾಲೇಜಿನಲ್ಲಿ ಕಲಿಸುವ ನನ್ನ ಸ್ನೇಹಿತರೊಬ್ಬರು ಇದಕ್ಕೆ ರೀಜನಲ್ ಮೆಂಟಾಲಿಟಿ ಸಿಂಡ್ರೋಮ್ ಅಂತೇನೋ ಹೆಸರು ಹೇಳುತ್ತಾರೆ – ಅದರ ಬಗ್ಗೆ ನನಗೆ ಅಷ್ಟು ಗೊತ್ತಿಲ್ಲ.

ನನ್ನ ಗೆಳೆಯ ಕಾರ್ಯ ನಿರ್ವಹಿಸುವ ಒಂದು ಬೃಹತ್ ಸಾರ್ವಜನಿಕ ಉದ್ಯಮದಲ್ಲಿ ಅಧಿ ಕಾರಿಗಳಾಗಿ ಬರುವವರೆಲ್ಲಾ ಉತ್ತರಭಾರತದವರೇ...

ಅವನ ಆಫೀಸಿಗೆ ಹೋದರೆ ನಿಮಗೆ ನಿಮ್ಮ ಭಾಷೆ ಒಂದು ಬಿಟ್ಟು ಮತ್ತೆಲ್ಲಾ ಭಾಷೆಗಳ ಕಲರವ ಕೇಳಿಸುತ್ತೆ. ಇದೇನೋ ಹೀಗಾಗಿದೆಯಲ್ಲಾ? ಅಂತ ನಾನು ಅಪರೂಪಕ್ಕೆ ಅವನ ಆಫೀಸಿಗೆ ಭೇಟಿ ನೀಡಿದಾಗಲೆಲ್ಲಾ ಕೇಳುವುದುಂಟು.

ಲೋಕಲ್ ಹುಡುಗರು ದೊಡ್ಡ ಓದು ಮುಗಿಸಿದ ಕೂಡಲೇ ಅಮೇರಿಕಾ ಇಂಗ್ಲೆಂಡು ಅಂತ ಕೆಲಸ ಹುಡುಕಿ ಹೋಗುತ್ವೆ – ಅಮೇರಿಕಾದ ಆಸೆ ಇಲ್ಲದವರು ಮಾತ್ರಾ ಇಲ್ಲೀಗೆ ಬರ್ತಾರೆ... ಅಂತ ಆತ ನೋವಿನಿಂದ ಹೇಳುವುದೂ ಉಂಟು.

ಹೆಚ್ಚು ಕಡಿಮೆ ಈಗ ಅವನು ಮನೆಯಲ್ಲೂ ಅವನಮ್ಮನ ಭಾಷೆ ಬಿಟ್ಟು ಮಿಕ್ಕ ಭಾಷೆಯನ್ನೇ ಮಾತನಾಡುವ ಹಂತ ತಲುಪಿದ್ದಾನೆ – ಅವನ ಪರಿಸರದ ಪ್ರಭಾವ ಹೀಗೆ ಮಾಡಿದೆ ಅವನನ್ನು..!

ಕಳೆದ ತಿಂಗಳು ಅಪರೂಪಕ್ಕೆ ಗೆಳೆಯ ನನ್ನ ಕಛೇರಿಗೆ ಬಂದ.

ಇಷ್ಟೊಂದು ಆರಾಮವಾಗಿ ನೀನು ಬಂದದ್ದೇ ಇಲ್ಲ, ಬಾ ಅಂತ ಸ್ವಾಗತಿಸಿದೆ.

ಕಾಫಿ ಹೀರುತ್ತಾ ಅವನ ಈಚಿನ ಒಂದು ಅನುಭವ ಅವನು ಹೇಳಿದ.

ಪ್ರತಿಸಲದ ಹಾಗೆಯೇ ಈ ಸಲವೂ ಅವನ ಉದ್ಯಮಕ್ಕೆ ಹೊಸದಾಗಿ ಅಧಿಕಾರಿಗಳು ನೇಮಕವಾದರು. ಪ್ರತಿಸಲದ ಹಾಗೇ ಈ ಸಲವೂ ಉತ್ತರ ಭಾರತದವರೇ ಹೆಚ್ಚು ಸಂಖ್ಯೆಯಲ್ಲಿ ಆಯ್ಕೆಯಾಗಿದ್ದರು. ಅವರ ದಾಖಲೆಗಳ ಪೂರ್ವಭಾವಿ ಪರಿಶೀಲನೆ ಇವನದ್ದೇ. ಒಬ್ಬೊಬ್ಬರದ್ದೂ ದಾಖಲೆ ಪರಿಶೀಲಿಸಿ,ಅವರನ್ನ ವೈದ್ಯಕೀಯ ಪರೀಕ್ಷೆಗೆ ಇವನೇ ರವಾನಿಸಬೇಕು – ಎರಡು ಮೂರು ದಿವಸ ಹಿಡೀತಂತೆ ಈ ಕೆಲಸ. ಕೊನೇ ದಿವಸ ಒಂದು ಆಶ್ಚರ್ಯ ಕಾದಿತ್ತು.... ಅಂದ.

ಅದೇನಪ್ಪಾ? ಅಂತ ಕೇಳಿದೆ.

ಬೆಂಗಳೂರಿನ ಹತ್ತಿರದ ಒಂದು ಕನ್ನಡದ ಹುಡುಗಿ ಪರೀಕ್ಷೆ ಬರೆದು ಪಾಸು ಆಗಿ ನೇಮಕವಾಗಿದ್ದಾಳೆ.... ಅಂದ.

ಇದು ಆಶ್ಚರ್ಯದ ಸಂಗತಿಯೇ? ಅಂದೆ – ಬೆಂಗಳೂರಿನ ಹುಡುಗಿಯರು ಈಗ ಒಂಟಿಯಾಗೇ ಅಮೇರಿಕಾ, ರಷ್ಯಾ, ಜಪಾನು, ಇಂಡೋನೇಷಿಯಾದಲ್ಲಿ ಕೆಲಸ ಮಾಡಬೇಕಾದರೆ ಇದೇನು ಹೆಚ್ಚು ಅನಿಸಿತ್ತು...

ಅದನ್ನೇ ಹೇಳೋದಕ್ಕೆ ಬಂದೆ. ಈ ಹುಡುಗಿ ಹ್ಯಾಂಡಿಕ್ಯಾಪ್ಡು... ಎರಡು ಸಲ ಪರೀಕ್ಷೆ ಬರೆದು ಫೈಲ್ ಆದಳಂತೆ, ಸುಮಾರು ಕಡೆ ಕೆಲಸಕ್ಕೆ ಅಂತ ಹೋಗಿ ಕೆಲಸವೂ ಸಿಗಲಿಲ್ಲ – ಇವಳು ಹ್ಯಾಂಡಿಕ್ಯಾಪು ಅಂತ.. ಹಠ ಬಂದುಬಿಡ್ತು. ನಾನು ಯಾರಿಗೆ ಕಡಿಮೆ ಯಾತರಲ್ಲಿ ಕಡಿಮೆ ಅಂತ.. – ಮತ್ತೆ ಹಠ ಹಿಡಿದು ಪರೀಕ್ಷೆ ಬರೆದೆ... ಅಂತ ಹೇಳಿಕೊಳ್ತು ಹುಡುಗಿ.

ಇಷ್ಟೆಲ್ಲಾ ಡ್ರಾಬ್ಯಾಕ್ಸ್ ಇದ್ದರೂ ಕಷ್ಟ ಪಟ್ಟು ಆಲ್ ಇಂಡಿಯಾ ಲೆವೆಲ್‌ನಲ್ಲಿ ಪರೀಕ್ಷೆ ಪಾಸ್ ಮಾಡಿ ನಮ್ಮಲ್ಲಿ ಕೆಲಸಕ್ಕೆ ಸೇರಿದ್ದಾಳೆ ಅಂದರೆ ಆಶ್ಚರ್ಯ ಆಗುಲ್ಲವೇ... ಅಂದ.

ಅಂಗವಿಕಲರಿಗೆ ಇರುವ ಅದಮ್ಯ ಚೇತನ ಮತ್ತು ಜೀವನೋತ್ಸಾಹದ ಬಗ್ಗೆ ಸುಮಾರು ಹೊತ್ತು ವಿಚಾರ ವಿನಿಮಯ ನಡೆಸಿದ.

ಆಮೇಲೆ ಒಂದು ದಿವಸ ಅವನ ಆಫೀಸಿಗೆ ಹೋದೆ, ಅಲ್ಲೇ ಇದ್ದ ಆ ಹುಡುಗಿಯನ್ನು ಗೆಳೆಯ ಪರಿಚಯಿಸಿದ. ಅವಳ ಹತ್ತಿರ ನಾನು ಅರ್ಧ ಗಂಟೆ ಮಾತನಾಡಿರಬಹುದು, ಅಂಗವಿಕಲತೆ ಒಂದು ನ್ಯೂನತೆಯೇ ಅಲ್ಲ ಅಂತ ಅನಿಸಿತು.

ಎಲ್ಲವೂ ಸರಿಯಾಗಿರುವುದೇ ನ್ಯೂನತೆಯಾಗಬಹುದೇನೋ..!

ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವ ಮತ್ತು ಗೆಲುವನ್ನು ಸಾಧಿಸುವ ಒಂದು ಛಲವನ್ನು ಪ್ರಕೃತಿ ನಮಗೆ ಹುಟ್ಟಿನಿಂದಲೇ ನೀಡಿರುತ್ತೆ – ಅದನ್ನು ಉಪಯೋಗಿಸಿಕೊಳ್ಳುವವರ ಸಂಖ್ಯೆ ಹೆಚ್ಚಿನದಲ್ಲ.... ಅಂತ ಅನಿಸಿತು!

**

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂಸಅ

- ಜನರು ತಮ್ಮ ಆದಾಯದ ಮಿತಿಯನ್ನು ಅರಿತು ಬದುಕುವುದರಿಂದ ತನ್ನ ಆದಾಯದ ಮಿತಿಯಲ್ಲಿ ಬದುಕಲಾಗದ ಸರ್ಕಾರಕ್ಕೆ ತೆರಿಗೆ ಪಾವತಿಸಲು ಸಾಧ್ಯವಾಗುತ್ತದೆ.
- ನೀವು ಅಂದುಕೊಂಡಿರುವುದಕ್ಕಿಂತ ಹೆಚ್ಚು ಒಳ್ಳೆಯವರಾಗಿರಲು ಸಾಧ್ಯ.
- *A dil mango more* ಸೀಸನ್ ಇದು.
- **'ಐರನ್ ಮ್ಯಾನ್'** ಚಿತ್ರ ಕನ್ನಡಕ್ಕೆ ಡಬ್ ಆದರೆ ಅದು **'ಇಸ್ತ್ರಿವಾಲ'** ಆಗುತ್ತದೆಯೇ?
- *If you have a heart you can help anybody.*
- 'ಕಟ್ಟುವೆವು ನಾವು ಹೊಸ ನಾಡೊಂದನು' ಎಂದರೂ ವಾಸ್ತು ಪ್ರಕಾರವೇ ಕಟ್ಟಿ ಎಂದರೆ ಹೇಗೆ?
- ಸುಳ್ಳು ನಿಜವಾಗುವುದು ನಾವು ಅದನ್ನು ನಂಬಿದಾಗ ಮಾತ್ರ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಪ್ರತಿ ರಾತ್ರಿ ನಾನು ನನ್ನ ಚಿಂತನೆಗಳನ್ನು ದೇವರಿಗೆ ಒಪ್ಪಿಸುತ್ತೇನೆ. ಹೇಗಿದ್ದರೂ ಅವನು ಎದ್ದಿರುತ್ತಾನೆ ತಾನೆ?
- *It is offensive when people just buy everything without desiring anything.*
- ನಮ್ಮ ತಪ್ಪುಗಳಿಂದಲೇ ಕಲಿಯುವಂತಾದರೆ ಅದು ಶುದ್ಧ ಮೂರ್ಖತನವಾದೀತು.
- ಖಾಸಗಿ ಆಸ್ಪತ್ರೆಗಳನ್ನು ಮೆಡಿಕಲ್ ಮಾಲ್‌ಗಳು ಎಂದು ಕರೆದರೆ ಹೇಗೆ?
- ಮಹನೀಯರೆ, ಮಹಿಳೆಯರೆ ಮತ್ತು ಅವರಿಬ್ಬರೂ ಅಲ್ಲದ ಇತರರೆ....
- *Beware, he is like soda in a bottle, mostly silent but when shaken likely to explode.*
- '12 ತಾಸಿನ ಶಿಫ್ಟ್ ಮುಗಿದ ಮೇಲೂ ಎಷ್ಟು ಚುರುಕಾಗಿರ್ತೀನಿ ನಾನು' – ಎಂದು ಯಾರೂ ಹೇಳರು.
- ನೀನು ಸುಳ್ಳು ಹೇಳಿದ್ದರಿಂದ ನನಗೆ ಬೇಸರವಾಗಲಿಲ್ಲ, ಇನ್ನು ಮುಂದೆ ನಿನ್ನನ್ನು ನಂಬಲು ಸಾಧ್ಯವಿಲ್ಲ ಎಂಬುದರಿಂದ ಬೇಜಾರಾಗಿದೆ.
- *A new word to describe our politicians - corrogance-corruption+arrogance.*
- ದೇವರು ಇದ್ದಾನೆಯೋ ಇಲ್ಲವೋ ಎಂಬುದು ಮುಖ್ಯವಲ್ಲ, ದೇವರು ನಿಮಗೆ ಬೇಕೋ ಬೇಡವೋ ಎಂಬುದು ಮುಖ್ಯ.


✲✲


## ಪುಸ್ತಕ ಪರಿಚಯ

### ಬೇಲೂರು ರಾಮಮೂರ್ತಿ ಅವರ

# ಹಾಸ್ಯ ಗಂಗೋತ್ರಿ ಮತ್ತು ಹಾಸ್ಯ ವೈವಿಧ್ಯ

**(ಪ್ರಕಾಶಕರು : ಹೇಮಂತ ಸಾಹಿತ್ಯ, ಬೆಂಗಳೂರು)**




## ಹಾಸ್ಯ ಗಂಗೋತ್ರಿ

ಇದರಲ್ಲಿರುವ 18 ಲೇಖನಗಳು ವೈವಿಧ್ಯಮಯವಾಗಿವೆ. ಸೋಮು ಸೋಮಿ ದಾಂಪತ್ಯದ ನವಿರಾದ ಘಟನೆಗಳ ಸೂಕ್ಷ್ಮ ಅವಲೋಕನ ಇಲ್ಲಿದೆ. ಒಂದೊಂದು ಲೇಖನದಲ್ಲೂ ಬಗೆ ಬಗೆಯ ಹಾಸ್ಯ ಪ್ರಸಂಗಗಳು, ತುಂಬಾ ಸರಳವಾದ ಭಾಷೆ, ಚುಮುಚುಮುಗೊಳಿಸುವ ಹಾಸ್ಯದ ಪಂಚ್‌ಗಳು, ಓದುವಾಗ ಕಚಗುಳಿ ಇಟ್ಟಂತಾಗುತ್ತದೆ.

## ಹಾಸ್ಯ ವೈವಿಧ್ಯ

ಹೆಸರೇ ಸೂಚಿಸುವಂತೆ ಇಲ್ಲಿ ವೈವಿಧ್ಯಮಯವಾದ ಬರಹಗಳಿವೆ, ಚುಟುಕಗಳಿವೆ, ಹನಿಗವನಗಳಿವೆ, ಜೋಕುಗಳಿವೆ, ಅಣಕ ಹಾಡುಗಳಿವೆ. ಎಲ್ಲಾ ಸೇರಿ ಹಾಸ್ಯದ ಸಂತರ್ಪಣೆಯೇ ಆದಂತಿದೆ. ಇದರ ಜೊತೆಗೆ ರಘುಪತಿ ಶೃಂಗೇರಿ ಅವರ ವ್ಯಂಗ್ಯ ಚಿತ್ರಗಳು ಲೇಖನಗಳಿಗೆ ಪೂರಕವಾಗಿ ಮೂಡಿ ಬಂದಿವೆ.

# ಎಲ್ಲಾ ಶಿವನಾಟ!

## (ಲಲಿತ ಪ್ರಬಂಧ)

**- ಗುಂಡುರಾವ್ ದೇಸಾಯಿ, ಮಸ್ಕಿ**

**ಎ**ರಡು ಹೆಣ್ಣು ಹುಟ್ಟಿದ ಮ್ಯಾಲೆ ಈಕಿಗೆ ''ಸಾಕು ಇಷ್ಟಕ್ಕೆ ಸಮಾಧಾನ ಪಟ್ಟುಕೊಳ್ಳೋಣ. ಆಪರೇಷನ್ ಮಾಡಿಸಿಕೊಂಡು ಬಿಡು'' ಎಂದು ಸಲಹೆ ನೀಡಿದೆ. 'ಆಯ್ತು' ಎಂದು ನನ್ನ ಒತ್ತಾಯಕ್ಕೆ ಒಪ್ಪಿಗೆ ಏನೋ ನೀಡಿದಳು. ಯಾವ ಶರವೇಗದಾಗ ಅವ್ವನ ಕಿವಿಯಾಗ ಬಡದಿತ್ತೋ, ಮನೆಗೆ ಬರುತ್ತಿದ್ದಂತೆ ಅವ್ವ ಎರಡನೇ ಮೊಮ್ಮಗಳ ಮುಖಾನ ನೋಡಾಕನ ರೆಡಿ ಇಲ್ಲದ 'ಘೋ' ಎಂದು ಅಳತೊಡಗಿದ್ಲು, ''ರಂಡೆಗಂಡ, ವಂಶಾನ ನಿರ್ವಂಶ ಮಾಡಬೇಕಂತ ಮಾಡಿ ಏನು? ನಿಮ್ಮಪ್ಪ ಹುಟ್ಟಿ ಬರಬಾರದೇನೋ ಸನ್ಯಾಸಿ? ಆಪರೇಷನ್ ಮಾಡಸ್ತಿಯ....? ನೀನು ಹಿಂಗ ಮಾಡೋಂಗಿತ್ತು ಅಂದ್ರ, ನಾನು ಊಟ ನೀರು ಬಿಟ್ಟು ಕೂಡುತೀನಿ'' ಎಂದು ಪಟ್ಟು ಹಿಡಿದಳು. ಅದರಾಗ ಜೊತಿಗಿದ್ದ ಪದ್ದು ಬಾಯಿ ಹಾಕಿ ''ನಾನು ಹೇಳಿದಿನ್ರೀ ಮಾಮಿ, ಸರಕಾರಿ ನೌಕರಿ ಅದ! ಯಾಕ ಚಿಂತಿ ಮಾಡತಿದಿ, ಅಂದ್ರೂನೂ! 'ಸರಕಾರಿ ನೌಕ್ರಿದ್ರ ಹೆಗ್ಗಣ ಹಡದಂಗ ಹಡದುಬಿಡಬೇಕೇನು? ಎರಡಕ್ಕರ ಮುಗಿಸಿದ್ರ ಎರಡು ನೂರು ರೂಪಾಯೆರ ಹೆಚ್ಚಿಗೆ ಸಿಗತ್ತ ಅಂತನಾ!' ಎಷ್ಟ ಆಸಿರಿ ಇವುಂದು'' ಅಂತ ಅವ್ವನ ಮುಂದ ಒದರಿದ. ಕೂಡಲೇ ''ಭಾಡ್ಯಾ...... ನಿನ್ನ ಹಣೆ ಬರಹಕ್ಕ ಎಷ್ಟು ದುಡದ್ರು ಸಾಲವಲ್ತು. ಇಡೀ ನನ್ನ ಪೆನಷನ್ ಎಲ್ಲಾ ತೋಗೊಂತಿ, ಎರಡು ನೂರು ಕಡಿಮೆ ಬಿತ್ತನೂ'' ಎಂದ್ಲು, ದೊಡ್ಡ ಶ್ಯಾಣನ ಮುಂದ ಹೇಳಿದೆ ಅಂತ ಸುಮ್ಮನಾದೆ.

ಅಮ್ಮನ ಹಠ ಅಂದ್ರ ಹಠ. ಗುರಿ ಇಟ್ಟ ಮ್ಯಾಲ ಹಣ್ಣ ಕೀಳತನ ಬಡೋಳಲ್ಲ, ಆಯ್ತು ಬೇರೆ ದಾರಿ ಹುಡುಕೋಣ ಎಂದು ನಿರ್ಧಾರವನ್ನ ತಾತ್ಕಾಲಿಕವಾಗಿ ಬದಲಿಸಿದೆ. ಬದಲಿಸಿದ ಮೇಲೂ ಆಪರೇಷನ್ ಮಾಡಿಸುವ ಅವಕಾಶ ಸಿಗಲಿಲ್ಲ, ಇಕಿಗೂ ಅಷ್ಟ ಬೇಕಾಗಿತ್ತು. ಇಟ ಸಣ್ಣ ವಿಷಯ ಮನದಾಗ ಇರಬೇಕಾದ್ದು ಇಡಿ ಊರಿಗೆ ಅದೇಂಗ ಗೊತ್ತಾತೋ? ಆ ಹೆಣ್ಣು ಜೀವ ಸೃಷ್ಟಿಸಿದ ಶಕ್ತಿನ ಹೇಳಬೇಕು! ಹೊರಗ ಹೋಗದ ಕಳುವಾತು. ಮಾತಾಡಿಕೊಳ್ಳುವವರ ಆಹಾರವಾದೆ. 'ನೀನು ಬಾಳ ಶ್ಯಾಣೆ ಇದ್ದಿದಿ ಅಂತ ತಿಳಕೊಂಡಿದ್ವೆಪ, ಇಂತ ಪಾಪಗೇಡಿ ಕೆಲಸಕ್ಕಿಳಿತಾನ ಅಂತ ಅನಕೊಂಡಿರಲಿಲ್ಲ' ಅಂತ ಮುಖ ತಿವುದು ಹೇಳೊರ್ಯಾರೊ, ''ಆ.... ಭಾರಿಪ ನೀನು, ಎರಡ ಹೆಣ್ಣಿಗೆ ಅರಳಿಬಿಡೋದ. ಯಾಕ ಮುಂದುವರೆಕ ಧೈರ್ಯ ಇಲ್ಲನು?'' ಅಂತ ಲೇವಡಿ ಮಾಡವನ್ಯಾವುನೋ.

''ಹೆಣ್ಣ ಹುಟ್ಟಿವೆ ಅಂತ ಚಿಂತೆ ಮಾಡಬೇಡಪ, ಇವತ್ತು ಹೆಣ್ಣಿಂದು ಎಷ್ಟು ಡಿಮ್ಯಾಂಡು ಅದ ಅಂತ ಗೊತ್ತದಲ್ಲೊ? ತಿರುಗಿ ಕೊಟ್ಟು ತೊಳೊ ಕಾಲ ಬಂದಾದ'' ಅಂತ ಧೈರ್ಯ ಹೇಳೋರ್ಯಾರ್ಯಾರೋ!

ಅಲ್ಲದ ನಾ ಮರೆತು ಫೋನ ಮಾಡದೆ ಇದ್ದವರು, ಮುದ್ದಾಂ ಫೋನ್ ಮಾಡಿ ''ಏನಪ ಹೆಣ್ಣ ಹಡದರ ತಿಳಸಬಾರದಂತದನು, ನಿನ್ನ ದುಃಖದಾಗ ನಾವು ಭಾಗಿಗಳಪ'' ಅಂತಾನೂ ಸಂತಾಪದ ತರಹ ಸೂಚಿಸಿದ್ರು.

ಆಪರೇಷನ್ ಪ್ಲಾನು ಫೇಲು ಆತು ಅಂತ ಹಾಂಗ ಬಿಡಾಕಾಗುತ್ತೇ! ಪರ್ಯಾಯ ಮಾರ್ಗ ಹುಡುಕಾಕತಿದೆ. ಕೆಲ ದಿನ ಪ್ಲಾನಿಂಗ ಮಾಡೋಣ ಅಂದಾಗ ಇಕಿನೂ 'ಎಸ್ ಎಸ್' ಎಂದ್ಲು, ಹಾಂಗ ಮುಂದುವರೆದಿತ್ತು ಬದುಕು. ಮೂರು ವರ್ಷ ಕಳಿದಿರಲಿಲ್ಲ ಸ್ಟಾರ್ಟ ಆಯ್ತು ಅವ್ವಂದು. ಕೂಸಿನ ಮುಂದ ''ತಮ್ಮನ್ನ ಜಲ್ದಿ ಕರಕಳಂಗಿಲ್ಲೇನು? ತಮ್ಮನ್ನ ಜಲ್ದಿ ಕರಕಳಂಗಿಲ್ಲೇನು?'' ಎಂದು ಜಿಗದು ಜಿಗದು ನಮಗ ಕೇಳಾಂಗ ಮಾತಾಡತಿದ್ಲು. ಈಕಿಗೆ ''ಅವ್ವ ಹಾಂಗ ಅಂತಿರ್ಲಿ, ಇದೊಂದು ವರ್ಷ ತಡೆಮ'' ಅಂತ ಮುಂದಾಕೆಂತ ಬಂದೆ. ಎರಡನೇ ಮಗಳು ಹುಟ್ಟಿ ನಾಲ್ಕು ವರ್ಷ ಆದ ಮೇಲೆ ಸಂಕ್ರಮಣ ಕಾಲ ನನ್ನ ಪಾಲಿಗೆ ಶುರುವಾತು. ಅವ್ವ ನಾ ಇಲ್ಲದಾಗ ಈಕಿಗೆ ಕಿರಿಕಿರಿ ಹಚ್ಚಾಕಿ, ಇಕಿ ನಾನು ಒಂಟಿ ಇದ್ದಾಗ ಕಿವಿ ಚುಚ್ಚಾಕಿ. 'ಶೀಘ್ರವೇ ನಿಮ್ಮ ಭರವಸೆಗಳನ್ನು ಈಡೇರಿಸುತ್ತೇನೆ' ಎಂದು ರಾಜಕಾರಣಿಗಳ ತರಹ ಆಶ್ವಾಸನೆ ನೀಡಿದೆ. ವರಕೌಟ ಆಗ್ಲಿಲ್ಲ. ಆಕಿಗೂ ಗೊತ್ತಾಗಿತ್ತು ನನ್ನ ಮನಸಿನ್ಯಾಗಿಂದು. ಇನ್ಮೂಂದ ಸಾಧ್ಯನ ಇಲ್ಲ ಅಂದ್ಲು. 'ಇನ್ನ ತುಸು ದಿವಸ ಪ್ಲಾನಿಂಗ್ ಅಷ್ಟ' ಅಂದೆ 'ನೋ ನೋ' ಅಂದ್ಲು. ನಾನು 'ನೋ ನೋ' ಅಂದಾಗ ಮನಿ ವಾತಾವರಣನೂ ಅನೌನ್ ಆಯ್ತು. ಮೌನ ಮೌನ ಮೌನ ಎಲ್ಲಿತನ ನೋಡಬೇಕರಿ, ನಾನು ಒಂದು ನಿರ್ಧಾರಕ್ಕ ಬಂದೆ. ಅಂತರ್ಜಾಲವನ್ನ ತಡಕ್ಯಾಡಿ ಎಲ್ಲರಿಗೂ ಸಂತೋಷ ಕೊಡುವ, ನನಗೆ ಮಾತ್ರ ದುಃಖ ತರಿಸುವಂತಹ ಬ್ಲಾಕ ಪಿರೀಡನ್ನು ಹುಡಕಿ ಪಕ್ಕ ಮಾಡಿಕೊಂಡು ಫಾಲೋ ಅಪ್ ಮಾಡಿಕೊಂತ ಹೊಂಟೆ.

ಅಂತರ್ಜಾಲದ ಮಾಹಿತಿ ಕೃಪಾ ಕಟಾಕ್ಷದಿಂದ ಎಲ್ಲಾ ಸುಸೂತ್ರವಾಗಿ ನಡೆದಿತ್ತು. ಆರು ತಿಂಗಳ ಕಳದ್ರೂ ಫಲಿತಾಂಶ ಸಿಗಲಿಲ್ಲ. ಮನ್ಯಾಗ ಅನುಮಾನ ಸ್ಟಾರ್ಟ ಆಯ್ತು?

'ಇವರಿಗೆ ಎರಡು ವರ್ಷದ ಹಿಂದ ಹರ್ನಿಯಾ ಆಪರೇಷನ್ ಆಗಿತ್ತು! ಆ ಟೈಮಿನ್ಯಾಗೇನಾರಾ......?' ಅಂತ ಪ್ರಶ್ನೆ ಮಾಡಿದ್ರು. 'ಇದ್ರೂ ಇರಬಹುದು' ಅಂದೆ.

ಅದು ಅವ್ವನ ತನನೂ ಹೋಯ್ತು. ಅವ್ವ ಆಣಿ ಮಾಡಿಸಿ ಕೇಳಿದ್ಲು. 'ಇಲ್ಲಮ್ಮ ತಾಯಿ' ಅಂದೆ.

'ಖರೇ ಹೇಳು ರಂಡೆ ಗಂಡ. ಏನರ ಮಾಡಿಕೊಂಡಿಯೇನು?' 'ಇಲ್ಲ ಮಹರಾಳ' ಅಂದ್ರೂ ಕೇಳವಳ್ಳು, ಯಾಕರ ಹಾಂಗ ಹೇಳಿದೆನೂ ಎಂದು ಹಪಹಪಿಸುವಾಂಗ ಮಾಡಿದ್ಲು. ಸಹೋದರಿ ಕೂಡಾ ಕೆದಕಾಕ ಪ್ರಯತ್ನಿಸಿದಳು. ನನಗೂ ಅನುಮಾನ ಸ್ಟಾರ್ಟ ಆಯ್ತು. ಎಲ್ಲೇರ ಸಿದ್ಧಣ್ಣ ಡಾಕಟ್ರು ಅನಸ್ತೇಷಿಯಾ ಕೊಟ್ಟಾಗ ನರ ಕಟ್ಟು ಮಾಡ್ಯಾರೇನು.....! ಅಂತ. ಹಾಂಗಾಗಿದ್ರ ಛಲೋನ ಆತು ಅಂತ ಸುಮ್ಮನಾಗಿದ್ದೆ.

ಇದ್ದಕ್ಕಿದ್ದಂಗ ಇಕಿ ಒಂದು ಸೋಮವಾರದಿಂದ ಉಪವಾಸ ಸ್ಟಾರ್ಟ ಮಾಡಿದ್ಲು. 'ಇದು ಏನೆ ಹೊಸ ವರಾತ' ಎಂದೆ. 'ಸೋಳಾ ಸೋಮವಾರ ವೃತ' (17 ಸೋಮವಾರ ಈಶ್ವರನನ್ನು ಹುತ್ತಿನ ಮಣ್ಣಿನಿಂದ ಮಾಡಿ ಉಪವಾಸವಿದ್ದು ಪೂಜಿಸುವ ವ್ರತ) ಅಂದ್ಲು. ನನಗ ಮೈ ಉರಿತು. 'ದೇವರ ಮೂಲಕ ನನಗ ಸವಾಲು ಹಾಕ್ತಿಯಾ? ನೌನ ನೀನಾ ಪೇಷಂಟ ಇದ್ದಾಂಗ ಇದ್ದಿ, ಹಾಳ ಉಪವಾಸ ಮಾಡಿಕೊಂತ ಮತ್ತೇನಾಗಬೇಕಂತ ಮಾಡಿದಿ' ಅಂತ ದಬಾಯಿಸಿದೆ. ಆಕಿ ಜುಮ್ಮ ಅನ್ನಲಿಲ್ಲ. ಅವ್ವಂದು ಸಪೋರ್ಟ ಇತ್ತಲ್ಲ. ಅಷ್ಟೂ ಸೋಮವಾರ ಮಾಡಿದ್ಲು. ಅದರಾಗ ಆ ವ್ರತ ಮಾಡಿದ್ರ, ಪಕ್ಕ ಅನಕೊಂಡ ರಿಜಲ್ಟ ಅಂತ! ನಾನು ಮತ್ತಿಷ್ಟ ಜಾಗರೂಕನಾದೆ. ನಿತ್ಯ ಇಂಟರನೆಟ್ ಜಾಲಾಡಕತಿದೆ. ಎಚ್ಚರ ತಪ್ಪಬಾರದು ಅಂತ! ಒಂದು ಮಾಸದಾಗ ಈಕಿಗೆ ಆರಾಮ ತಪ್ಪಿದಂಗ ಆಗಿ, ಡೇಟ್ ಫರಕ ಆಗಿ ನಾನು ಪೆಕರ ಆಗಿ ಬಿಟ್ಟೆ ನಾನು ಲೆಕ್ಕಾಚಾರದಾಗ ಇದ್ದೆ ನನ್ನ ಲೆಕ್ಕ ಕೈಕೊಟ್ಟಿತೋ? ಆಕಿನ ವೃತ ಕೈಹಿಡಿತೋ? ಅಷ್ಟರಾಗ ವ್ರತನೂ ಮುಗದಿತ್ತು. ತವರ ಮನಿಗೆ ಹೋದಾಗ ಫೋನ್ ಮಾಡಿ ನಕ್ಕೋತ 'ಗುಡ್ ನ್ಯೂಜರ್‍ರೀ' ಅಂದ್ಲು. ನಾನು ಸತ್ಯನಪ ಅಂದೆ. 'ನನ್ನ ವ್ರತ ಮುಗಿಯಾಕ ಈಶಪ್ಪ ದಯ ಮಾಡಿದನರಿ' ಎಂದ್ಲು. ನನ್ನ ನಂಬಿಕೆಯ ವಿಜ್ಞಾನ ಕೈಕೊಟ್ಟಿತ್ತಲ್ಲ ಅಂತ ಕೈಕೈ ಹಿಚಿಗಿಕೊಂಡೆ. ಕೂಡಲೇ 'ಬಾ ಊರಿಗೆ' ಅಂತ ಬುಲಾವ್ ಮಾಡಿದೆ. ಜುಂ ಅನ್ನಲಿಲ್ಲ. ಅವ್ವಗ ಹೇಳಿದೆ ನಿನಗ ಅಡಿಗೆ ಮಾಡಕ ತ್ರಾಸಗತ್ತ ಬರಕ ಹೇಳು ಅಂತ. 'ನನಗೇನು ತ್ರಾಸ ಆಗಲ್ಲ ಆಕಿ ಅಲ್ಲೆ ಇರಲೇಳು' ಅಂದ್ಲು. ಒಂದು ದಿವಸ ಊರಿಗೆ ಹೋದ್ರ ಆಕಿನ ಕು....... ಹರೆಂಗ ದಬಾಯಸ್ತಿದ್ವ, ಯಾಕರ ಊರಿಗೆ ಹೋಗಿದ್ನೋ? ಅನ್ನುಕೊಳ್ಳೊಂಗ ಮಾಡುತ್ತಿದ್ದ ನನ್ನವ್ವ.....ಹೆತ್ತವ್ವ ಹೇಳೊ ಮಾತಾ! ಅಂತ ಗಾಭರಿಯಾಗಿ ವಾಸ್ತವನಾ? ಕನಸಾ? ಅಂತ ಚಿವಟಿಕೊಂಡು ಖಾತ್ರಿ ಮಾಡಿಕೊಂಡೆ. ನನಗ ಮುಜುಗರ ಸ್ಟಾರ್ಟ ಆಯ್ತು. ಕೇಳಿದವರಿಗೆಲ್ಲ, ಧಿಮಾಕ ಬಡದು ಹೇಳಿದ್ದೆ ಸ್ಟಾಪ ಮಾಡಿನಪಂತ. ಮುಂದಾಗುವ ಅವಮಾನಗಳನ್ನು ನೆನಸಿಕೊಂಡು ಬಂದು ಕೂಡಲೇ ಕೈತೊಂಡೆ ಮೊದಲು ತಗಸು ಅಂತ. 'ಅಯ್ಯ! ತಗಸಾಕ ಬರಲ್ರೀ ಆಗಲೇ ಟೈಮೀರಿ ಹೋಗ್ಯಾದ' ಅಂತ ಅಂದ್ಲು. ಡಾಕ್ಟರ‍್ನ ಕೇಳಿ ಪಕ್ಕಾ ಮಾಡಿಕೊಂಡೆ, ಮ್ಯಾಲೆ ಅವರಿಂದ ಸ್ವಲ್ಪ ಏನು ಭರ್ತಿ ಉಗಿಸಿಕೊಂಡೆ. ಎರಡು ತಿಂಗಳ ತವರಿನಾಗ ಇದ್ದು ತಿಂಡಿ ಮುರಿಯಾಕ ಬಂದಿದಿ ಎಂದು ಮನಸು ಕುದಿತಿತ್ತು. ತಡಕಳಾರದ ಹೊರಹಾಕತಿದ್ದೆ. ಕೊನಿಗೆ ಒಂದು ಗಟ್ಟಿ ನಿರ್ಧಾರ ಮಾಡಿ ನನ್ನ ಹಣೆಬರಹನ ಸುದ್ದಿಲ್ಲ, ಬಂದದ್ದು ಬರಲಿ. ನನ್ನ ಮಾತುಗಳು ಅವಳ ಹೊಟ್ಟಿಯಾಗಿನ ಜೀವಕ್ಕ ತ್ರಾಸ ಆಗುಹಾಂಗ ಮಾಡಬಾರದು ಅಂತ ಸಂಕಟನ ತಡಕೊಂಡೆ. ಮನಸಿನಲ್ಲಿ ಒಂದ ಯಾತನೆ, ಹೊರಗಿನ ಸ್ನೇಹಿತರ ಒಂದು ಕಾಟ. ''ಏನೇನ ಬಾಳ ಬಿಗದಿದಿ ಅಲ್ಲಪ, ಏನು ಇದು?'' ಅಂತ ರೇಗಸಕ ಸುರು ಮಾಡಿದಾಗ ''ಆಪರೇಷನ್ ಫೇಲಾಗಿ ಬಿಟ್ಟಾದೋ'' ಅಂತ ಬಾಣ ಬಿಟ್ಟು ಪಾರಾದೆ.

ಸಮಯ ಸಮೀಪಸಾಕತ್ತಿತು. ಒಂದು ಅಂತ ನಿರ್ಧಾರ ಮಾಡಿದ್ದೆ. ಏನಾದ್ರೂ ಆಗಲಿ ಸ್ವೀಕರಿಸೋಣ ಅಂತ. ಎಷ್ಟಾದ್ರೂ ಹುಲುಮಾನವರಲ್ಲವೇ ನಾವು? ಮನಸಿಲ್ಲಿ ತಳಮಳ ಇದ್ದೆ ಇತ್ತು. ಒಂದು ದಿವಸ ಮಧ್ಯರಾತ್ರಿ ಡೆಲವರಿನೂ ಆಯ್ತು. ಸಿಸ್ಟರ್ ಬಂದು 'ಈಶಪ್ಪ

ಕೈಬಿಡಲಿಲ್ರಿ ಮೇಷ್ಟ್ರ' ಅಂದ್ರು. ನಾನು 'ಏನಾಯ್ತ್ರಿ?' ಎಂದೆ. 'ಆದೇರಿ?' ಅಂದ್ಲು. 'ಹಾಂ!' ಅಂದೆ. 'ಯಾಕ ಗಾಭರಿ ಆಗ್ತಿರಿ ಪುತ್ರ ಹುಟ್ಯಾನ' ಅಂತ ಅಂದ್ರು. ನನಗ ನಂಬಕಾಗವಲ್ತು. ವಾರ್ಡಗೆ ಬಂದಮ್ಯಾಗ ಹೋಗಿ ಮೊದಲ ಬುಡುಕಿನಿಂದ ನೋಡಿಕೊಂತ ಬಂದೆ. ಪಕ್ಕಾ ಆತು ಆದ್ರೂ ಬಿಡಲಿಲ್ಲ. ಆಕಿ ನಗತಿದ್ಲು. ಅದೇಂಗ ಅವ್ವಗ ಶರವೇಗದಾಗ ಸುದ್ದಿ ಮುಟ್ಟಿತ್ತೋ ಮನಿ ಮುಟ್ಟಷ್ಟಿಗೆ ಎಲ್ಲ ರೆಡಿಮಾಡಿ 'ಒಯ್ಯಪ್ಪ ಬಾಣಂತಿಗೆ ಮಗುವಿಗೆ ಕೊಡಪ' ಅಂತ ಏನೇನೋ ಕಟ್ಟು ರೆಡಿ ಮಾಡಿ ಕೊಟ್ಟಳು. ಜಗವಿದು ನಾಟಕ ರಂಗ ಅನಕೊಂಡೆ. ಮರುದಿನ ಸುದ್ದಿ ಮುಡಸಬೇಕಲ್ಲ. ನನಗ ಮುಜುಗರ ಅದಕ ಬೆಳಿಗ್ಗೆ ಹೊತ್ತೇರಿದ ಮ್ಯಾಗನ ಕೆಲಸ ಶುರು ಹಚ್ಚಿಕ್ಕೊಂಡೆ. 'ಭಲೋ ಆತಪ. ಅಪ್ಪ ಹುಟ್ಟಿ ಬಂದ ಅಂತ' ಹಿತೈಷಿಗಳು ಖುಷಿ ಪಟ್ರು. ಮಾವನೊಬ್ಬ ಮುದ್ದಾಂ ಫೋನ ಮಾಡಿ 'ಅಂತೂ ಸಾಧಿಸಿಬಿಟ್ಟೆಪ್ಪ. ಹ್ಲಾಂ....... ಗುರಿ ಸಾಧಿ ಸಿಬಿಟ್ಟೆಪ್ಪ. ನಿಂದು ಏನಂತ ತೋರಿಸಿಬಿಟ್ಟೆಪ್ಪಾ. ಗುಡ್ ಗುಡ್ ಕಿಪಿ ಇಟ್ ಅಪ್' ಅಂದ. ಏನೋ ದೊಡ್ಡ ನ್ಯಾಷನಲ್ ಅವಾರ್ಡ ಪಡುದೋರಿಗೆ ಹೇಳೊ ತರ. ನನಗ ಮಾತು ಬಾರಲಿಲ್ಲ. ಹೊರಗಿನವರಿಗೆ ಯಾರಿಗೂ ಹೇಳಿರಲಿಲ್ಲ. ಏನ್ರೀ? ಮೇಷ್ಟ್ರ ಅಂದ್ರು. ನಾನು ಎಲ್ಲಾ ಈಶ್ವರ ಅರ್ಥಾತ ಶಿವನಾಟಪ ಅಂದೆ. ಕೆಲವರು 'ಮೇಷ್ಟ್ರಾಗಿ ನಾಚಿಗಿ ಬರತ್ತೇನ್ರೀ?' ಅಂದ್ರು, ಸಮರ್ಥಿಸಿಕೊಳ್ಳಾಕ ಆಗವಲ್ತು 'ನನ್ನದೇನದ, ಎಲ್ಲಾ ಶಿವನಾಟ' ಅಂದೆ. 'ಮತ್ತೇನ್ರೀ ಮೇಷ್ಟ್ರ! ಎದಿನ ಹೊಡದು ಸತ್ತುಹೋಗತ್ತಿದ್ದವರು ಉಳಕಂಡ್ರಿ. ಅದಕ ಶಾಂತಿ ಇಲ್ಲನೂ' ಅಂತ ಕೆಲವರು ಸಾಣಿ ಹಿಡದ್ರು. 'ಅವರಿಗೆ ಅಂತ ಪಾರ್ಟಿ ಕೊಟ್ಟರಿ ಅಂದ ಮ್ಯಾಗ, ನಾವೇನು ತಪ್ಪು ಮಾಡಿದಿವ್ರೀ' ಅಂತ ಉಳಿದವರು ನುಣ್ಣಗ ಮಾಡಿದ್ರು. ಎಲ್ಲಾ ಶಿವನಾಟ 'ಆಗಲಿ' ಅಂದೆ. ಮೊನ್ನೆ ನನ್ನ ಪುಸ್ತಕ ಬಿಡುಗಡೆಗೆ ಅಂಕಣಕಾರರಾದ ಎನ್. ರಾಮನಾಥರವರು ಬಂದಾಗ 'ಎಷ್ಟ್ರೀ ಮಕ್ಕಳು?' ಅಂದ್ರು. ನಾನು ನಾಚಿಕೆಯಿಂದ 'ಟು ಪ್ಲಸ್ ಒನ್' ಅಂದೆ. ಏನ್ರೀ ಈ ತುಟ್ಟಿಕಾಲದಾಗ ಇಷ್ಟು ಧಾರಾಳತನ! 'ಅದಕ್ಕರಿ ಮೇಷ್ಟ್ರುಗಳಿಗೆ ರಜೆ ಕಡಿಮೆ ಮಾಡಬೇಕು' ಅಂದ್ರು. ನಾನು ಎಲ್ಲರಿಗೂ ಹೇಳಿದಾಂಗೆ ಎಲ್ಲ ಶಿವನಾಟರಿ ಅಂದೆ. ಅವರು 'ಹಾಂ!' ಅಂದ್ರು 'ಹೌದ್ರಿ ಎಲ್ಲಾ ಮ್ಯಾಲಿನತಂದ' ಅಂದೆ. ವಿಷಯ ಕೇಳಿ ಬಿದ್ದು ಬಿದ್ದು ನಕ್ಕರು.

ನಂತರ ಜಿಜ್ಞಾಸೆ ಸ್ಟಾರ್ಟ ಆಯ್ತು. ಈ ದ್ವಿಗ್ವಿಜಯದ ಕ್ರೇಡಿಟ್ಟು ಯಾರಿಗೆ ಸಲ್ಲಬೇಕು ಅಂತ. ಮನಿಗೆ ಹೊತ್ತಾಗಿ ಹೋದಾಗ ಅವ್ವ ಇರಲಿಲ್ಲ ಅಂತ ಕಾಣುತ್ತೆ. ಹತ್ತ-ಹದಿನೈದು ಜನ ಹೆಣ್ಣುಮಕ್ಕಳು ಸೇರಿ ಕಿರೀಟ ತೊಡಸಾಕ ಹತ್ತಿದ್ರು. 'ಪಾಪ ಅತ್ತಿಸೊಸೆ ಹನುಮಪ್ಪಗ, ಯಂಕಪ್ಪಗ ಬಾಳ ನಡಕೊಂತಿದ್ರು. ಖರೆನ ಅದು ಆಗೇ ಬಿಡ್ತು' ಅಂದ್ಲು ಒಬ್ಬಾಕಿ. 'ಅದೂನು ಸರೆ, ಅದರ ಜೊತಿಗಿ ಆ ಈಶಪ್ಪನೂ ಕಾರಣ' ಅಂದ್ಲು ಇನ್ನೊಬ್ಬಾಕಿ. 'ಅದೇಂಗಾಗತ್ತ, ಅವರೇನು ಸುಮ್ಮನೆ ಕೊಟ್ಟರೇನು? ಪಾಪ ಇವರು ಎಷ್ಟು ತ್ರಾಸ ಪಟ್ರು' ಎಂದ್ಲು ಮತ್ತೊಬ್ಬಾಕಿ. ಹಿಂಗ ಅವರ ಗಂಭೀರ ಚರ್ಚದಾಗ. ನಾನು ಅಡ್ಡಬಂದು 'ಹೌದೂ......! ಹಾಂಗಾದ್ರ, ನಂದೇನು?' ಅಂತ ಅಡ್ಡ ಬಾಯಿ ಹಾಕಿದೆ. ಬೆಕ್ಕಿನಂಗ ಪುಸಕ್ಕನ ನಾನು ಬಂದದಕ ಸೇರಿದವರೆಲ್ಲ ನಕ್ಕೋತ ದುಬುದುಬು ಎದ್ದು ಹೋದ್ರು.

**

# ಯಾರು ಬೈದಿದ್ದು

- ಬೇಲೂರು ರಾಮಮೂರ್ತಿ

( ಗೊತ್ತಾಗ್ಬೇಕಾದ್ರೆ ಈ ಪುಟವನ್ನು ತಲೆಕೆಳಕಾಗಿ ನೋಡಿ )

1 ನಿಮ್ಮ ತರ್ಲೆ ಮಾತುಗಳನ್ನು ಬಿಟ್ಟು ಇಲ್ಲಿಂದ ರೈಟ್ ಹೇಳ್ತಿರಿ

2 ನಿಮ್ಮ ಬಾಯಿಗೆ ಸ್ವಲ್ಪ ಬ್ರೇಕ್ ಹಾಕ್ಕೊತೀರಾ ಇಲ್ಲಾ ನಾನೇ ಹಾಕ್ಲಾ

3 ನನ್ನತ್ರ ನಿಮ್ಮಾಟದ ಗಾಲಿ ಉರುಳಿಸಿದ್ರೆ ಬ್ಲೋ ಬಿಚ್ಚಿಬಿಡ್ತೀನಿ ಹುಷಾರ್

4 ನನ್ ತಂಟೆಗೆ ಬಂದ್ರೆ ನೀವು ನಾನು ಬೈಯೋದನ್ನು ಎಣಿಸ್ತಾ ಕೂತ್ಕೊಬೇಕು

5 ನನ್ನ ಕೆಣಕಿದ್ರೆ ನಿಮ್ಮನ್ನ ಗೋಡೆಗೆ ಗುದ್ದಿ ಪ್ಲಾಸ್ಟರ್ ಮಾಡಿಬಿಡ್ತೀನಿ

6 ನಿಮ್ಮ ಬಾಯಿ ಏನಿದ್ರೂ ಆಚೆ ಕಡೆ ತೆಗೀರಿ ಮನೇಲಲ್ಲ

7 ನನ್ನ ಹತ್ರ ಆಟ ಕಟ್ಕೋಕೆ ಬಂದ್ರೆ ನಿಮ್ಮನ್ನ ನಿಮ್ಮಮ್ಮನ ಮನೆಗೆ ಪಾರ್ಸಲ್ ಮಾಡಿಬಿಡ್ತೀನಿ

8 ನಿಮ್ಮಮ್ಮನ ಪರ ವಕಾಲತ್ತು ವಹಿಸಿಕೊಂಡು ಬಂದ್ರೆ ನನ್ನ ಪಾಟೀಸವಾಲಿಗೆ ಉತ್ತರ ಕೊಡೋಕ್ಕೆ ಸಿದ್ದವಾಗಿರಿ

9 ನನ್ನತ್ರ ನಿಮ್ಮ ನಾಟಕ ಎಲ್ಲ ತೋರಿಸೋಕೆ ಬರಬೇಡಿ, ಬಂದ್ರೆ ನಿಮ್ಮ ಬಣ್ಣ ಬಯಲು ಮಾಡ್ತೀನಿ

10 ನಿಮ್ಮ ಹಳೆ ಚಾಳಿ ಬಿಡದಿದ್ರೆ ಇವತ್ತು ನಾನೇ ನಿಮಗೆ ಪೂಜೆ ಮಂಗಳಾರತಿ ಮಾಡಬೇಕಾಗುತ್ತೆ

1 ಕಂಡಕ್ಟರ್ ಹೆಂಡತಿ

2 ಬಸ್ ಡ್ರೈವರ್ ಹೆಂಡತಿ

3 ಮೋಟರ್ ಸೈಕಲ್ ಗ್ಯಾರೇಜಿನವನ ಹೆಂಡತಿ

4 ಬ್ಯಾಂಕ್ ಕ್ಯಾಷಿಯರ್ ಹೆಂಡತಿ

5 ಗಾರೆ ಕೆಲಸದವನ ಹೆಂಡತಿ

6 ರಾಜಕಾರಿಣಿ ಹೆಂಡತಿ

7 ಕೊರಿಯರ್ ನೌಕರನ ಹೆಂಡತಿ

8 ಲಾಯರ್ ಹೆಂಡತಿ

9 ರಂಗ ಕಲಾವಿದನ ಹೆಂಡತಿ

10 ಗುಡಿಯ ಪೂಜಾರಿ ಹೆಂಡತಿ

**